www.janavaadi.in

# ಜನವಾದಿ

ರಾಯಚೂರು
ಕಲಬುರಗಿ
ಯಾದಗಿರಿ
ಕೊಪ್ಪಳ
ಬಳ್ಳಾರಿ
ಬೀದರ್

ಸಂಪಾದಕ : ಬಸವರಾಜ ಹೆಚ್
Editor : Basavaraj H

ಜನರ ಅಂತರಂಗದ ಧ್ವನಿ
ಕನ್ನಡ ದಿನಪತ್ರಿಕೆ

JANAVAADI
Kannada Daily News Paper

ಸಂಪುಟ : 11 ಸಂಚಿಕೆ : 263 ಪುಟ:4 ರಾಯಚೂರು ಗುರುವಾರ 08–05–2025 RNI NO.KARKAN/2012/56428 ಮೊಬೈಲ್: 9448300139,9449711232. e-mail : janavaadi@gmail.com ಬೆಲೆ : 2 ರೂ.

VOLUME : 11 ISSUE : 263 PAGES : 4 RAICHUR THURSDAY 08-05-2025 RNI NO.KARKAN/2012/56428 MOBILE:9448300139,9449711232. E-MAIL:janavaadi@gmail.com PRICE : 2 RS.

## ಧಾರವಾಡ ಸೇರಿ ದೇಶದ ಐದು ಐಐಟಿಗಳ ವಿಸ್ತರಣೆಗೆ ಕೇಂದ್ರ ಸಚಿವ ಸಂಪುಟ ಅಸ್ತು

ನವದೆಹಲಿ ಮೇ 7– ರಾಜ್ಯದ ಧಾರವಾಡ ಐಐಟಿ ಸೇರಿದಂತೆ ದೇಶದ ಐದು ಐಐಟಿಗಳಲ್ಲಿ 11,828.79 ಕೋಟಿ ರೂ. ವೆಚ್ಚದಲ್ಲಿ ಶೈಕ್ಷಣಿಕ ಮತ್ತು ಮೂಲಸೌಕರ್ಯ ಸಾಮರ್ಥ್ಯ ವಿಸ್ತರಣೆಗೆ ಕೇಂದ್ರ ಸಚಿವ ಸಂಪುಟ ಬುಧವಾರ ಅನುಮೋದನೆ ನೀಡಿದೆ ಎಂದು ಕೇಂದ್ರ ಆಹಾರ ಮತ್ತು ನಾಗರೀಕ ಸರಬರಾಜು ಸಚಿವ ಪ್ರಹ್ಲಾದ ಜೋಶಿ ಅವರು ತಿಳಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯಲ್ಲಿ ಇಂದು ನಡೆದ ಕೇಂದ್ರ ಸಚಿವ ಸಂಪುಟ ಸಭೆ, ರಾಜ್ಯದ ಧಾರವಾಡ ಐಐಟಿ ಹಾಗೂ ಆಂಧ್ರಪ್ರದೇಶ ತಿರುಪತಿ ಐಐಟಿ, ಛತ್ತೀಸ್‌ಗಢದ ಭಿಲಾಯಿ ಐಐಟಿ, ಜಮ್ಮು–ಕಾಶ್ಮೀರದ ಜಮ್ಮು ಐಐಟಿ ಮತ್ತು ಕೇರಳದ ಪಾಲಕ್ಕಾಡ್‌ಗಳಲ್ಲಿ ಸ್ಥಾಪಿಸಿರುವ ಭಾರತೀಯ ತಂತ್ರಜ್ಞಾನ ಸಂಸ್ಥೆಗಳ(ಐಐಟಿ) ಶೈಕ್ಷಣಿಕ ಮತ್ತು ಮೂಲಸೌಕರ್ಯ ಸಾಮರ್ಥ್ಯ ವಿಸ್ತರಣೆಗೆ ಅನುಮೋದನೆ ನೀಡಿತು ಎಂದು ಹೇಳಿದ್ದಾರೆ.

### ರಾಯಚೂರು ಪೇಟೆ ದರ

| | |
|---|---|
| **ಸಣ್ಣ ಭತ್ತ(ಸೋನಾ)** | |
| ಕನಿಷ್ಠ | 1896 |
| ಗರಿಷ್ಠ | 2222 |
| **ಒಣಕಡಲೆ** | |
| ಕನಿಷ್ಠ | 5200 |
| ಗರಿಷ್ಠ | 5680 |
| **ಕೆಂಪು ತೊಗರಿ** | |
| ಕನಿಷ್ಠ | 6802 |
| ಗರಿಷ್ಠ | 7052 |
| **ಶೇಂಗಾ (ಗುಂಗ್ರು)** | |
| ಕನಿಷ್ಠ | 3355 |
| ಗರಿಷ್ಠ | 5549 |
| **ಸೂರ್ಯಕಾಂತಿ** | |
| ಕನಿಷ್ಠ | 3666 |
| ಗರಿಷ್ಠ | 5066 |
| **ಈರುಳ್ಳಿ** | |
| ಕನಿಷ್ಠ | – |
| ಗರಿಷ್ಠ | – |

### ರಾಯಚೂರು ಜಿಲ್ಲೆ ಇಂದಿನ ಹವಾಮಾನ ಮುನ್ಸೂಚನೆ



ಗರಿಷ್ಠ : 40 ಸೆಲ್ಸಿಯಸ್
ಕನಿಷ್ಠ : 28 ಸೆಲ್ಸಿಯಸ್

# ‘ಆಪರೇಷನ್ ಸಿಂಧೂರ’: ಸಿಎಂ, ಡಿಸಿಎಂ, ವಿಜಯೇಂದ್ರ ಸೇರಿದಂತೆ ರಾಜ್ಯದ ನಾಯಕರಿಂದ ಶ್ಲಾಘನೆ

ಬೆಂಗಳೂರು ಮೇ 7– ಜಮ್ಮು ಮತ್ತು ಕಾಶ್ಮೀರದ ಪಹಲ್ಗಾಮ್‌ನಲ್ಲಿ ನಡೆದ ಭಯೋತ್ಪಾದಕ ಪ್ರತೀಕಾರವಾಗಿ, ಭಾರತ 'ಆಪರೇಷನ್ ಸಿಂಧೂರ ' ಹೆಸರಿನಲ್ಲಿ ಪಾಕಿಸ್ತಾನದ ಉಗ್ರರ ನೆಲೆಗಳ ಮೇಲೆ ವೈಮಾನಿಕ ದಾಳಿ ನಡೆಸಿದೆ. ಈ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ರಾಜ್ಯ ವಿವಿಧ ಪಕ್ಷಗಳ ನಾಯಕರು ಪ್ರತಿಕ್ರಿಯಿಸಿದ್ದಾರೆ.





ಸಿಎಂ ಸಿದ್ದರಾಮಯ್ಯ ಸಾಮಾಜಿಕ ಮಾಧ್ಯಮ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, "ಆಪರೇಷನ್ ಸಿಂಧೂರ್ ಹಿಂದಿನ ನಮ್ಮ ಸಶಸ್ತ್ರ ಪಡೆಗಳ ಅಸಾಧಾರಣ ಧೈರ್ಯಕ್ಕೆ ನಾನು ಸೆಲ್ಯೂಟ್ ಮಾಡುತ್ತೇನೆ. ಅವರ ವೀರೋಚಿತ ಕಾರ್ಯಾಚರಣೆ ಭಾರತ ಯಾವುದೇ ರೀತಿಯ ಭಯೋತ್ಪಾದನೆಯನ್ನು ಸಹಿಸುವುದಿಲ್ಲ ಎಂದು ಪುನರುಚ್ಚ–ರಿಸುತ್ತದೆ" ಎಂದಿದ್ದಾರೆ.

"ಪಹಲ್ಗಾಮ್‌ನಲ್ಲಿ ನಡೆದ ಕ್ರೂರ ದಾಳಿ ಕೇವಲ ಮುಗ್ಧ ಜೀವಗಳ ಮೇಲೆ ನಡೆದದ್ದಲ್ಲ, ಅದು ಭಾರತದ ಕನಸುಗಳು ಮತ್ತು ಚೈತನ್ಯದ ಮೇಲಿನ ದಾಳಿಯಾಗಿದೆ. ನಮ್ಮ ಧೈರ್ಯಶಾಲಿ ಸೈನಿಕರ ಪ್ರತಿಯೊಂದು ಪ್ರಯತ್ನವೂ ದಾಳಿಯ ಸಂತ್ರಸ್ತರಿಗೆ, ಅವರ ಕುಟುಂಬಗಳಿಗೆ ಮತ್ತು ಶಾಂತಿ ಮತ್ತು ಮಾನವೀಯತೆಯಲ್ಲಿ ನಂಬಿಕೆ ಹೊಂದಿರುವ ಪ್ರತಿಯೊಬ್ಬ ಭಾರತೀಯರಿಗೆ ನ್ಯಾಯ ಒದಗಿಸುವ ಪ್ರತಿಜ್ಞೆಯಾಗಿದೆ" ಎಂದು ಹೇಳಿದ್ದಾರೆ.

"ನಮ್ಮ ಪಡೆಗಳೊಂದಿಗೆ ಅಚಲವಾದ ಒಗ್ಗಟ್ಟನ್ನು ಪ್ರದರ್ಶಿಸಲು ಕರ್ನಾಟಕ ದೇಶದ ಜೊತೆ ನಿಲುತ್ತದೆ. ನಿಮ್ಮ ಶೌರ್ಯ, ತ್ಯಾಗ ಮತ್ತು ನಮ್ಮ ಸಾರ್ವಭೌಮತ್ವವನ್ನು ರಕ್ಷಿಸಲು ನಿಮ್ಮ ಅಚಲ ಬದ್ಧತೆಯ ಬಗ್ಗೆ ನಮಗೆ ಹೆಮ್ಮೆ ಇದೆ. ನಮ್ಮ ನೆಲದಲ್ಲಿ ಭಯೋತ್ಪಾದನೆಗೆ ಜಾಗವಿಲ್ಲ. ಭಾರತವು ಶಕ್ತಿ ಮತ್ತು ಏಕತೆಯಿಂದ ಪ್ರತಿಕ್ರಿಯಿಸುತ್ತದೆ" ಎಂದು ತಿಳಿಸಿದ್ದಾರೆ.

**ಸೂಕ್ತ ಪ್ರತ್ಯುತ್ತರ – ಡಿಕೆ ಶಿವಕುಮಾರ್:** ಹೇಡಿತನದ ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಇದೇ ಸೂಕ್ತ ಪ್ರತ್ಯುತ್ತರವಾಗಿದೆ. ನಾವು ಸರ್ಕಾರದೊಂದಿಗೆ ನಿಲ್ಲುತ್ತೇವೆ, ನಮ್ಮ ಭದ್ರತಾ ಪಡೆಗಳೊಂದಿಗೆ ನಿಲ್ಲುತ್ತೇವೆ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬರೆದಿದ್ದಾರೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ, 26 ಅಮಾಯಕ ಭಾರತೀಯ ಹೆಣ್ಣುಮಕ್ಕಳ ಸಿಂಧೂರ ಅಳಿಸಿದ ಭಯೋತ್ಪಾದಕ ರಕ್ಕಸರ ವಿರುದ್ಧದ ಪ್ರತಿಕಾರ 'ಆಪರೇಷನ್ ಸಿಂಧೂರ' ಆರಂಭ ಎಂದು ಎಕ್ಸ್ ನಲ್ಲಿ ಪೋಸ್ಟ್ ಮಾಡಿದ್ದಾರೆ.

ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಪ್ರತಿಕ್ರಿಯಿಸಿ, ಆಪರೇಷನ್ ಸಿಂಧೂರ ಕೇವಲ ಒಂದು ದಾಳಿಯಲ್ಲ, ಇದು ಹಣೆಯ ಮೇಲೆ ಹಚ್ಚಿದ ರಾಷ್ಟ್ರೀಯ ಸಿಂಧೂರ. ಭಾರತ ಹೊಡೆದಾಗ ಜಗತ್ತು ನೋಡುತ್ತದೆ ಮತ್ತು ಸ್ವಲ್ಪ ನಡುಗುತ್ತದೆ. ಆಪರೇಷನ್ ಸಿಂಧೂರ ಕೇವಲ ದಾಳಿಯಲ್ಲ, ಇದು ಭಾರತದ ಸಾರ್ವಭೌಮತ್ವದ ಸಂಕೇತ. ಭಾರತೀಯ ಸೇನೆಯ ಧೈರ್ಯ ಮತ್ತು ಪ್ರಧಾನಿ ಮೋದಿಜಿ ಅವರ ನಿರ್ಭೀತ ನಾಯಕತ್ವಕ್ಕೆ ನನ್ನ ನಮನಗಳು. ನವಭಾರತವು ಎಚ್ಚರಿಸುವುದಷ್ಟೇ ಅಲ್ಲ, ಅದು ತನ್ನ ಕರ್ತವ್ಯ ನಿರ್ವಹಿಸುತ್ತದೆ ಎಂದು ಪೋಸ್ಟ್ ಮಾಡಿದ್ದಾರೆ.

ರಾಜ್ಯ ಜೆಡಿಎಸ್ ಎಕ್ಸ್‌ನಲ್ಲಿ ಪೋಸ್ಟ್ ಮಾಡಿ, ಆಪರೇಷನ್ ಸಿಂಧೂರ'ಕ್ಕೆ ಜಯವಾಗಲಿ. ಕಾಶ್ಮೀರದ ಪಹಲ್ಗಾಮ್ ಉಗ್ರ ದಾಳಿಗೆ ಪ್ರತೀಕಾರವಾಗಿ ಭಾರತೀಯ ಸಶಸ್ತ್ರ ಪಡೆಗಳು ಕೈಗೊಂಡಿರುವ 'ಆಪರೇಷನ್ ಸಿಂಧೂರ' ಕಾರ್ಯಾಚರಣೆ ಯಶಸ್ವಿಯಾಗಲಿ. ಉಗ್ರ ಪೋಷಕ ರಾಷ್ಟ್ರ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರ ಹಾಗೂ ಕಾಶ್ಮೀರದಲ್ಲಿನ ಭಯೋತ್ಪಾದಕರ ಅಡಗು ತಾಣ ಮತ್ತು ಶಿಬಿರಗಳ ಮೇಲೆ ಭಾರತೀಯ ಸೇನೆ ನಿಖರ ದಾಳಿ ಮಾಡಿ ಧ್ವಂಸ ಗೊಳಿಸಿದೆ.. ಪಾಕಿಸ್ತಾನದ ಉಗ್ರರ ಸಂಹಾರಕ್ಕಾಗಿ ಕೈಗೊಂಡಿರುವ “ಆಪರೇಷನ್ ಸಿಂಧೂರ” ಸೇನಾ ಕಾರ್ಯಾಚರಣೆ”ಯನ್ನು ಜೆಡಿಎಸ್ ಪಕ್ಷವು ಬೆಂಬಲಿಸುತ್ತದೆ ಮತ್ತು ಸ್ವಾಗತಿಸುತ್ತದೆ. ಭಯೋತ್ಪಾದಕರ ವಿರುದ್ಧದ ಹೋರಾಟದಲ್ಲಿ ಭಾರತೀಯ ಸೇನೆ ಯಶಸ್ವಿಯಾಗಲಿ. ದೇಶದ ಸಮಸ್ತ ನಾಗರಿಕರ ಬೆಂಬಲವೂ ದೊರಕಿದ್ದು, ಇಡೀ ವಿಶ್ವವೇ ಭಾರತದ ಪರವಾಗಿ ಬೆಂಬಲಕ್ಕೆ ನಿಂತಿದೆ ಎಂದಿದೆ.

**ಕ್ಷಮೆಗೆ ವಿಜಯೇಂದ್ರ ಆಗ್ರಹ :** ರಾಜ್ಯದ ಕಾಂಗ್ರೆಸ್ ನಾಯಕರು ತಮ್ಮ ಎಕ್ಸ್ ಪೋಸ್ಟ್ ಸಂಬಂಧ ದೇಶದ ಜನರ ಕ್ಷಮೆ ಯಾಚಿಸಬೇಕು ಎಂದು ಬಿಜೆಪಿ ರಾಜ್ಯಾಧ್ಯಕ್ಷ ಮತ್ತು ಶಾಸಕ ಬಿ.ವೈ.ವಿಜಯೇಂದ್ರ ಆಗ್ರಹಿಸಿದ್ದಾರೆ.

ತಮ್ಮ ನಿವಾಸದ ಬಳಿ ಇಂದು ಮಾಧ್ಯಮಗಳ ಜೊತೆ ಮಾತನಾಡಿದ ಅವರು, ಕರ್ನಾಟಕ ಕಾಂಗ್ರೆಸ್ಸಿನವರು ಮನುಕುಲದ ಅತ್ಯಂತ ಶಕ್ತಿಯುತ ಶಸ್ತ್ರ ಶಾಂತಿ ಎಂದು ಪೋಸ್ಟ್ ಮಾಡಿದ್ದಾರೆ. ಇವರಿಗೆ ನಾಚಿಕೆ ಆಗಬೇಕಾಗಿತ್ತು. ಸಿಎಂ ಸಿದ್ದರಾಮಯ್ಯ, ಡಿಸಿಎಂ ಡಿ.ಕೆ.ಶಿವಕುಮಾರ್ ಮತ್ತು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿಯವರು ತಮ್ಮ ನಿಲುವನ್ನು ಸ್ಪಷ್ಟಪಡಿಸಬೇಕು ಎಂದು ಒತ್ತಾಯಿಸಿದರು.

ಇಂಥ ಸಂದರ್ಭದಲ್ಲಿ ಕಾಂಗ್ರೆಸ್ ಪಕ್ಷ ಇಂಥ ಹೇಳಿಕೆ ನೀಡಿದ್ದು, ಶೋಭೆ ತರತಕ್ಕಂಥದ್ದಲ್ಲ. ಕಾಂಗ್ರೆಸ್ಸಿನವರು ಉಗ್ರರ ಪರವಾಗಿ ಇದ್ದಾರಾ? ಭಾರತದ ಪರವಾಗಿ ಇದ್ದಾರಾ? ಅಥವಾ ಪಾಕಿಸ್ತಾನದ ಪರವಾಗಿದ್ದಾರೋ ಎಂಬುದನ್ನು ಸ್ಪಷ್ಟಪಡಿಸಬೇಕಿದೆ ಎಂದು ಆಗ್ರಹಿಸಿದರು.

**ವಿಶೇಷ ಪೂಜೆ ಸಲ್ಲಿಸಿ ನೈತಿಕ ಸ್ಥೈರ್ಯ ತುಂಬಲು ಮನವಿ:** ಪ್ರತಿಯೊಬ್ಬ ಭಾರತೀಯರೂ ನಮ್ಮ ಸೈನಿಕರಿಗೆ ಬೆಂಬಲ ನೀಡಬೇಕು. ಬಿಜೆಪಿ ಕಾರ್ಯಕರ್ತರು ಮತ್ತು ರಾಜ್ಯದ ಜನತೆ ದೇವಸ್ಥಾನಗಳಲ್ಲಿ ವಿಶೇಷ ಪೂಜೆ ನೆರವೇರಿಸಬೇಕು ಎಂದು ಮನವಿ ಮಾಡಿದರು. ಯೋಧರಿಗೆ ನೈತಿಕ ಸ್ಥೈರ್ಯ ತುಂಬಬೇಕೆಂದು ವಿನಂತಿಸಿದರು.

## ವಾಸವಿ ಜಯಂತಿ ಉತ್ಸವ; ಅದ್ಧೂರಿ ರಥೋತ್ಸವ

ಜನವಾದಿ ವಾರ್ತೆ

ರಾಯಚೂರು ಮೇ 7– ಆರ್ಯವೈಶ್ಯ ಕುಲ ದೇವತೆ ಶ್ರೀ ವಾಸವಿ ಜಯಂತಿ ಇಂದು ಸಂಜೆ ಅದ್ಧೂರಿ ಮೆರವಣಿಗೆ ಯೊಂದಿಗೆ ಸಾಗಿತು. ವಿಶೇಷವಾದ ಹೂವಿನ ಅಲಂಕಾರಗಳಿಂದ ತಯಾರಿಸಿದ ರಥದಲ್ಲಿ ಶ್ರೀ ವಾಸವಿ ಉತ್ಸವ ಮೂರ್ತಿಯನ್ನು ಕೂಡಿಸಿ ಪೂಜೆ ಸಲ್ಲಿಸಿ ಮೆರವಣಿಗೆಗೆ ಚಾಲನೆ ನೀಡಿದರು. ಶ್ರೀ ನಗರೇಶ್ವರ ದೇವಸ್ಥಾನ ದಿಂದ ಹೊರಟ ಮೆರವಣಿಗೆಯಲ್ಲಿ ಸಾಗರದಂತೆ ಆರ್ಯವೈಶ್ಯರು ಬಂದಿದ್ದು ವಿಶೇಷವಾಗಿತ್ತು. ಈ ಮೆರವಣಿಗೆಯಲ್ಲಿ ಡೊಳ್ಳಾಟ, ಕಂಚಿ ಮೇಳ , ಚಿಲಿಪಿಲಿ ಗೊಂಬೆಗಳ ಆಕರ್ಷಣೆ, ಚಿತ್ರದುರ್ಗದ ರೇವಣ ಸಿದ್ದೇಶ್ವರ ಡೊಳ್ಳು ಕುಣಿತ, ವೀರಗಾಸೆ ಮತ್ತು ಆರ್ಯವೈಶ್ಯ ಮಹಿಳೆಯರು



ತಂಡ ತಂಡವಾಗಿ ಕೋಲಾಟ ಗಳು, ಸಾಂಸ್ಕೃತಿಕ ನೃತ್ಯಗಳು, ದೇವರ ಹಾಡುಗಳ ಧ್ವನಿವರ್ಧಕ ಹೀಗೆ ರಸ್ತೆಯಲ್ಲಿ ಸಾಂಸ್ಕೃತಿಕ ಮೆರಗು ಎದ್ದು ಕಾಣಿಸುತ್ತಿತ್ತು. ಮಾರ್ಗದ ಮಧ್ಯ ಪುರುಷರು, ಸ್ತ್ರೀಯರು, ಯುವಕ, ಯುವತಿಯರು ಕುಲದೇವತೆ ವಾಸವಿಗೆ ಜೈಕಾರಗಳು ಸಾರ್ವಜನಿಕರ ನಿಂತು ನೋಡುವಂತೆ ಮಾಡುತ್ತಿದ್ದವು.

ಇದೇ ಸಂದರ್ಭದಲ್ಲಿ ಸಣ್ಣ ನೀರಾವರಿ ಸಚಿವರಾದ ಎನ್. ಎಸ್.ಬೋಸರಾಜು, ಸಂಸದರಾದ ಜಿ.ಕುಮಾರ ನಾಯಕ, ವಿಧಾನ ಪರಿಷತ್ತು ಮಾಜಿ ಶಾಸಕರಾದ ಎನ್.ಶಂಕ್ರಪ್ಪ ವಕೀಲರು , ಕಾಂಗ್ರೆಸ್ ಪಕ್ಷದ ಮುಖಂಡರಾದ ರವಿ ಬೋಸರಾಜು, ಕೆ.ಶಾಂತಪ್ಪ , ಪತಂಗೆ ಜಯಂತರಾವ್, ಜಯಣ್ಣ, ಎನ್. ಶ್ರೀನಿವಾಸ ರೆಡ್ಡಿ, ನಗರ ಶಾಸಕರ ಸಹೋದರ ಸಿದ್ದನಗೌಡ ಪಾಟೀಲ, ಬಿಜೆಪಿ ಮುಖಂಡರಾದ ಕಡಗೋಲು ಆಂಜನೇಯ,

☛4

## ಕೇಂದ್ರ ಸರ್ಕಾರದ ವಿರುದ್ಧ ಪ್ರತಿಭಟನಾ ಸಮಾವೇಶ ರದ್ದುಗೊಳಿಸಿದ ಕಾಂಗ್ರೆಸ್

ಜನವಾದಿ ವಾರ್ತೆ

ರಾಯಚೂರು ಮೇ 7– ಉಗ್ರರ ವಿರುದ್ಧ ಕೇಂದ್ರ ಸರ್ಕಾರ ತೆಗೆದುಕೊಳ್ಳುವ ನಿರ್ಧಾರಕ್ಕೆ ಬದ್ಧರಾಗಿದ್ದೇವೆ" ಎಂದು ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ್ ಪಾಟೀಲ್ ತಿಳಿಸಿದರು.

ಕೇಂದ್ರ ಸರ್ಕಾರದ ಬೆಲೆ ಏರಿಕೆ ನೀತಿಯನ್ನು ಖಂಡಿಸಿ ನಗರದ ಮಹಾತ್ಮ ಗಾಂಧಿ ಜಿಲ್ಲಾ ಕ್ರೀಡಾಂಗಣದಲ್ಲಿ ಇಂದು ಕಲಬುರಗಿ ವಿಭಾಗ ಮಟ್ಟದ ಪ್ರತಿಭಟನಾ ಸಮಾವೇಶವನ್ನು ಕಾಂಗ್ರೆಸ್ ಆಯೋಜಿಸಿತ್ತು. ಆದರೆ ಪಹಲ್ಗಾಮ್‌ನಲ್ಲಿ ದಾಳಿಗೆ ಪ್ರತ್ಯುತ್ತರವಾಗಿ ನಮ್ಮ ಸೈನಿಕರು




ಉಗ್ರರ ನೆಲೆಗಳ ಮೇಲೆ ದಾಳಿ ನಡೆಸಿದ್ದಾರೆ. ಈ ಸಮಯದಲ್ಲಿ ನಾವು ಕೇಂದ್ರ ಸರ್ಕಾರಕ್ಕೆ ಬೆಂಬಲವಾಗಿ ನಿಲ್ಲುತ್ತೇವೆ. ಹೀಗಾಗಿ ಇಂದು ಆಯೋಜಿಸಿದ ಕಾರ್ಯಕ್ರಮವನ್ನು ರದ್ದುಗೊಳಿಸಿ, ಮುಂದಿನ ದಿನಗಳಲ್ಲಿ ದಿನಾಂಕ ಪ್ರಕಟಿಸಿ ಕಾರ್ಯಕ್ರಮ ನಡೆಸುವುದಾಗಿ ತಿಳಿಸಿದರು.

ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿ, ಅನೇಕ ಸಚಿವರು, ಹಾಲಿ ಹಾಗೂ ಮಾಜಿ ಸಂಸದರು, ಶಾಸಕರು, ಮುಖಂಡರು ಸೇರಿದಂತೆ ಹಲವು ಮುಖಂಡರು ಭಾಗವಹಿಸುವವ–ರಿದ್ದರು. ಅಲ್ಲದೇ ವಿವಿಧ ಕಡೆಗಳಿಂದ ಕಾಂಗ್ರೆಸ್ ಕಾರ್ಯಕರ್ತರು ಆಗಮಿಸುತ್ತಿದ್ದರು. ಇದೀಗ ಸಮಾವೇಶ ರದ್ದುಗೊಳಿಸಿದ ಪರಿಣಾಮ ಎಲ್ಲರೂ ಹಿಂದಿರುಗುತ್ತಿದ್ದಾರೆ. ಅಲ್ಲದೆ ನಗರದ ವಿವಿಧ ಕಡೆಗಳಲ್ಲಿ ಬಿಗಿ ಪೊಲೀಸ್ ಬಂದೋಬಸ್ತ್ ವ್ಯವಸ್ಥೆ ಕೈಗೊಳ್ಳಲಾಗಿತ್ತು ಎಂದು ಹೇಳಿದರು.

ದೇಶದ ಸೈನಿಕರು ಅಪರೇಷನ್ ಸಿಂಧೂರ ಹೆಸರಿನಲ್ಲಿ ಪಾಕ್‌ಗೆ ತಕ್ಕ ಉತ್ತರ ನೀಡಿದ್ದಕ್ಕೆ ಹರ್ಷ ವ್ಯಕ್ತಪಡಿಸಿದ ಸಚಿವ ಎನ್.ಎಸ್.ಬೋಸರಾಜು, ಶಾಸಕರಾದ ಬಸವನಗೌಡ ದದ್ದಲ್, ಎ.ವಸಂತಕುಮಾರ್, "ಉಗ್ರರನ್ನು ಮಟ್ಟ ಹಾಕುವುದಕ್ಕೆ ಕ್ರಮ ತೆಗೆದುಕೊಳ್ಳಬೇಕು. ಇದಕ್ಕೆ ನಮ್ಮ ಸಂಪೂರ್ಣ ಬೆಂಬಲವಿದೆ" ಎಂದರು.

## ಸಾಹಿತಿ, ವಿಮರ್ಶಕ ಜಿ. ಎಸ್. ಸಿದ್ದಲಿಂಗಯ್ಯ ನಿಧನ



ಬೆಂಗಳೂರು ಮೇ 7– ಕನ್ನಡದ ಸಾಹಿತಿ ಪ್ರೊ.ಜಿ.ಎಸ್.ಸಿದ್ದಲಿಂಗಯ್ಯ (94) ವಯೋಸಹಜ ಅನಾರೋಗ್ಯದಿಂದಾಗಿ ಮಂಗಳವಾರ ತಡರಾತ್ರಿ ಇಲ್ಲಿನ ವಿಜಯನಗರದ ಖಾಸಗಿ ಆಸ್ಪತ್ರೆಯಲ್ಲಿ ನಿಧನರಾಗಿದ್ದಾರೆ. ಮೃತರು ಪತ್ನಿ ಸೇರಿದಂತೆ ಅಪಾರ ಬಂಧು ಮಿತ್ರರನ್ನು ಅಗಲಿದ್ದಾರೆ.

ಸಿದ್ದಲಿಂಗಯ್ಯ ಅವರು ತುಮಕೂರು ಜಿಲ್ಲೆ ಬೆಳ್ಳಾವಿಯಲ್ಲಿ 1931ರ ಫೆ.20ರಂದು ಜನಿಸಿದರು. ಮೈಸೂರು ಮಹಾರಾಜ ಕಾಲೇಜಿನಲ್ಲಿ ಬಿಎ ಆನರ್ಸ್ (ಕನ್ನಡ)ನಲ್ಲಿ ಪ್ರಥಮ ರ್‍ಯಾಂಕ್ ಪಡೆದು ಉತ್ತೀರ್ಣರಾದರು.

ಮೈಸೂರು ವಿವಿಯಲ್ಲಿ ಎಂ–ಎ(ಕನ್ನಡ) ಸ್ನಾತಕ ಪದವಿಯನ್ನೂ ಪ್ರಥಮ ದರ್ಜೆಯಲ್ಲಿ ಪಾಸ್ ಮಾಡಿದ ಅವರು, ನಂತರ ದಾವಣಗೆರೆ, ತುಮಕೂರು, ಶಿವಮೊಗ್ಗದಲ್ಲಿ ಅಧ್ಯಾಪಕರಾಗಿ ಸೇವೆ ಸಲ್ಲಿಸಿದ್ದರು.

## ನಾಗರಿಕ ರಕ್ಷಣಾ ಕಾರ್ಯಾಚರಣೆ ಹಿನ್ನೆಲೆ ತುರ್ತು ಸಭೆ
## ಸಚಿವರು, ಸಂಸದರು, ಶಾಸಕರು, ಉನ್ನತ ಮಟ್ಟದ ಅಧಿಕಾರಿಗಳು ಭಾಗಿ

ಜನವಾದಿ ವಾರ್ತೆ

ರಾಯಚೂರು ಮೇ 07 – ತುರ್ತು ಪರಿಸ್ಥಿತಿಯ ಪ್ರತಿಕೂಲ ಸಂದರ್ಭದಲ್ಲಿ ನಾಗರಿಕ ರಕ್ಷಣೆ, ಹಾನಿ ಕಡಿಮೆಗೊಳಿಸುವುದು, ಸಶಸ್ತ್ರ ಪಡೆಗಳ ಕಾರ್ಯದಕ್ಷತೆ ಬಲಗೊಳಿಸುವುದು ಸೇರಿದಂತೆ ನಾನಾ ವಿಷಯಗಳ ಬಗ್ಗೆ ಮುಂಜಾಗ್ರತಾ ಕ್ರಮವಾಗಿ ರಾಯಚೂರ ಜಿಲ್ಲೆಯಲ್ಲಿ ಸಹ ನಾಗರಿಕ ರಕ್ಷಣಾ ಸಿದ್ಧತೆ ಕಾರ್ಯಾಚರಣೆ ಆರಂಭವಾಗಿದೆ.

ಈ ಹಿನ್ನೆಲೆಯಲ್ಲಿ ಮೇ 7ರಂದು ನೂತನ ಜಿಲ್ಲಾಧಿಕಾರಿಗಳ ಕಚೇರಿಯ ಸಭಾ ಭವನದಲ್ಲಿ ಸಚಿವರು, ಸಂಸದರು, ಶಾಸಕರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು




ಸೇರಿದಂತೆ ವಿವಿಧ ಇಲಾಖೆಗಳ ಉನ್ನತ ಅಧಿಕಾರಿಗಳ ಸಮ್ಮುಖದಲ್ಲಿ ತುರ್ತು ಸಭೆ ನಡೆಯಿತು.

ನಾಗರಿಕ ರಕ್ಷಣೆ, ನಾಗರಿಕ ರಕ್ಷಣಾ ಯೋಜನೆ, ಸೇನಾ ದಾಳಿ ಸಂದರ್ಭದಲ್ಲಿ ತೆಗೆದುಕೊಳ್ಳಬೇಕಾದ ಮುನ್ನೆಚ್ಚರಿಕೆ ಕ್ರಮಗಳು, ನಾಗರಿಕ ರಕ್ಷಣಾ ಕಾಯಿದೆ–1968, ಭಾರತ ರಕ್ಷಣಾ ಕಾಯಿದೆ 1962, 1971, ಜಿನೀವಾ ಕನ್ವೆನ್ಶನ್ ಕಾಯಿದೆ–2010, ನಾಗರಿಕೆ ರಕ್ಷಣೆ ಮತ್ತು ತರಬೇತಿ ಸೇರಿದಂತೆ ನಾನಾ ವಿಷಯಗಳ ಬಗ್ಗೆ ಸಭೆಯಲ್ಲಿ ವಿಸ್ತೃತ ಚರ್ಚೆ ನಡೆಯಿತು.

ತುರ್ತು ಪರಿಸ್ಥಿತಿಯ ಪ್ರತಿಕೂಲ ಸಂದರ್ಭದಲ್ಲಿ ಅಗ್ನಿಶಾಮಕ ಸೇವೆ, ರಕ್ಷಣಾ ಸೇವೆ, ತುರ್ತು ಸೇವೆ, ಕಲ್ಯಾಣ ಸೇವೆ, ಶವ ವಿಲೇವಾರಿ ಕ್ರಮಗಳು, ಸರ್ಕಾರಿ ಸಿಬ್ಬಂದಿ, ವಾರ್ಡನ್ ಮತ್ತು ಸ್ವಯಂ ಸೇವಕರನ್ನು ನೋಂದಾಯಿಸಿ

☛4

## ಅಕ್ರಮ ಕಾನೂನು ಬಾಹಿರವಾಗಿ ಸರ್ಕಾರಿ, ಅರಣ್ಯ ಭೂಮಿ ಖಾತಾ ಬದಲಾವಣೆ –ತಹಶಿಲ್ದಾರ ವಿರುದ್ಧ ತನಿಖೆಗೆ ಆಗ್ರಹ

ಜನವಾದಿ ವಾರ್ತೆ

ರಾಯಚೂರು ಮೇ 7– ತಹಶೀಲ್ದಾರ ಸುರೇಶ ವರ್ಮಾ ಇವರು ನಗರ ಮತ್ತು ಮಲಿಯಾಬಾದ್ ವ್ಯಾಪ್ತಿಯ ಸರಕಾರ ಮತ್ತು ಅರಣ್ಯ ಜಮೀನು ಗಳು ಒಟ್ಟು 84–37 ಎಕರೆ ಭೂಮಿಯನ್ನು ಫೋರ್ಜರಿ ಖಾತಾ ಬದಲಾವಣೆ ಮಾಡಿ ನೂರಾರು ಕೋಟಿ ರೂ. ಸರಕಾರಕ್ಕೆ ನಷ್ಟ, ವಂಚನೆ, ಮೋಸ ಮಾಡಿದ್ದು, ಅಧಿಕಾರ ದುರುಪಯೋಗಪಡಿಸಿ ಕರ್ತವ್ಯಲೋಪವೆಸಗಿದ ಇವರ ವಿರುದ್ಧ ಶಿಸ್ತು ಕ್ರಮ ಜರುಗಿಸಬೇಕು ಎಂದು ಸಾಮಾಜಿಕ ಕಾರ್ಯಕರ್ತ ವೈ.ಶ್ರೀನಿವಾಸ ಪೋತಗಲ್ ಇವರು ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.

ನಗರ ಹಾಗೂ ಅರಣ್ಯಪ್ರದೇಶದಲ್ಲಿನ ಸರ್ವೆ ನಂ. 1162ರಲ್ಲಿ 19 ಎಕರೆ 15 ಗುಂಟೆ, ಸರ್ವೆ.ನಂ 1161ರಲ್ಲಿ 11 ಎಕರೆ 25 ಗುಂಟೆ, ಮಲಿಯಾಬಾದ್ ಗ್ರಾಮದ ಸರ್ವೆ ನಂ.91ರಲ್ಲಿ 9 ಎಕರೆ 5 ಗುಂಟೆ, ವಾರ್ಡ್ ನಂ.33ರಲ್ಲಿ ನೂಲಿನ ಗಿರಣಿ 40 ಎಕರೆ 22 ಗುಂಟೆ, ಸರ್ವೆ ನಂ.1160ರಲ್ಲಿ 2 ಎಕರೆ 13 ಗುಂಟೆ, ಸರ್ವೆ ನಂ.56ರಲ್ಲಿ 14 ಗುಂಟೆ, ಒಟ್ಟು 84 ಎಕರೆ 37 ಗುಂಟೆ ಜಮೀನು ಸರ್ಕಾರಿ ಮತ್ತು ಅರಣ್ಯ ಪ್ರದೇಶ ಕಬ್ಜಾದಲ್ಲಿದ್ದು, ಅಕ್ರಮವಾಗಿ ಭೂ ಕಬಳಿಕೆದಾರರ ಹೆಸರಿಗೆ ಖಾತಾ ಬದಲಾವಣೆ ಮಾಡಿ, ಅಧಿಕಾರ ದುರುಪಯೋಗಪ ಡಿಸಿಕೊಂಡು ಸರ್ಕಾರಕ್ಕೆ ವಂಚನೆ ಮತ್ತು ಮೋಸ ಮಾಡಿದ್ದರಿಂದ ಕ್ರಮ ಕೈಗೊಳ್ಳಲು ಒತ್ತಾಯಿಸಿದರು.

ಸರಕಾರಿ ಮತ್ತು ಅರಣ್ಯ ಜಮೀನುಗಳು ಸುಮಾರು ಒಟ್ಟು 84 ಎಕರೆ 37 ಗುಂಟೆ ಜಮೀನುಗಳ ರಕ್ಷಣೆ ಮಾಡದೇ ಭೂ ಅತಿಕ್ರಮಣದಾರರ ಪರವಾಗಿ ನಿಂತು ತಮ್ಮ ಅಧಿಕಾರ ದುರುಪಯೋಗಿಸಿ

ಕಂದಾಯ ದಾಖಲೆಗಳಲ್ಲಿ ಕಾನೂನು ಬಾಹಿರವಾಗಿ ಅಕ್ರಮವಾಗಿ ಖಾತಾ ಬದಲಾವಣೆ ಮಾಡಿಸಿದ್ದಾರೆ. ಸರ್ಕಾರಿ ಜಮೀನುಗಳ ಅತಿ–ಕ್ರಮಣದಾರರು ಫೋರ್ಜರಿ ಇನಾಮ್ ದಾಖಲೆಗಳನ್ನು ಸೃಷ್ಟಿ ಮಾಡಿ. ಅಕ್ರಮಗಳನ್ನು ಎಸಗಿದವರಿಗೆ ಸಹಾಯ ಮಾಡುವ ರೀತಿಯಲ್ಲಿ

☛4

## ತಾ.ಪಂ. ಸಾಮಾನ್ಯ ಸಭೆ
## “ಬೇಸಿಗೆಯಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರವಹಿಸಿ”

ಜನವಾದಿ ವಾರ್ತೆ

ಸಿಂಧನೂರು ಮೇ 06 – ಹಿನ್ನಲೆಯಲ್ಲಿ ತಾಲ್ಲೂಕಿನ ಯಾವುದೇ ಗ್ರಾಮದಲ್ಲೂ ಕುಡಿಯುವ ನೀರಿನ ತೊಂದರೆಯಾಗದಂತೆ ನೋಡಿಕೊಳ್ಳಬೇಕು. ಸಮಸ್ಯೆಗಳಿದ್ದರೆ ಸಭೆಯಲ್ಲಿ ಹೇಳಿ ಪರಿಹಾರ ಕಂಡುಕೊಳ್ಳಿ, ಇಲ್ಲವಾದರೆ ಯಾವುದೇ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಾದರೆ ಆಯಾ ಪಂಚಾಯಿತಿ ವ್ಯಾಪ್ತಿಯ ಪಿಡಿಓಗಳನ್ನೆ ಹೊಣೆಯಾಗಿಸಿ ಕ್ರಮಕೈಗೊಳ್ಳಲಾಗುವುದು ಎಂದು ಶಾಸಕ ಹಂಪನಗೌಡ ಬಾದರ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಿದರು.



ಮಂಗಳವಾರ ನಗರದ ತಾ.ಪಂ.ಸಭಾಂಗಣದಲ್ಲಿ ಜಿಲ್ಲಾ ಪಂಚಾಯಿತಿ ಉಪಕಾರ್ಯದರ್ಶಿ, ತಾ.ಪಂ. ಆಡಳಿತಾಧಿಕಾರಿ ಶಶಿಕಾಂತ ಶಿವಪುರೆ ಅಧ್ಯಕ್ಷತೆಯಲ್ಲಿ ಸಾಮಾನ್ಯಸಭೆ ನಡೆಯಿತು. ಜೂನ್‌ವರೆಗೆ ಕುಡಿಯುವ ನೀರಿನ ಸಮಸ್ಯೆಯಾಗುವದಿಲ್ಲ. ಜೂನ್‌ನಲ್ಲಿ ಕುಡಿಯಲು ನೀರು ಬಿಟ್ಟರೆ ಮತ್ತೆ ಕೆರೆ ತುಂಬಿಸಿಕೊಳ್ಳಲಾಗುವುದು ಎಂದು ಪಿಡಿಓಗಳು ಮಾಹಿತಿ ನೀಡಿದರು.

**ತನಿಖೆಗೆ ಆದೇಶ:**

ತಾಲ್ಲೂಕಿನಲ್ಲಿ ಜಿಲ್ಲಾ ಪಂಚಾಯಿತಿ ಉಪ ವಿಭಾಗದ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದದಿಂದ ಮೂರು ಹಂತಗಳಲ್ಲಿ ಕೈಗೊಳ್ಳಲಾಗಿರುವ ಜಲಜೀವನ ಮಿಷನ್ ಕಾಮಗಾರಿ ಸಂಪೂರ್ಣ ಕಳಪೆಯಾಗಿದ್ದು, ತನಿಖೆ ನಡೆಸಿ


☛4

## ಎಸ್.ಎಸ್.ಎಲ್.ಸಿ ಪರೀಕ್ಷೆ –2 ಮೌಲಾನಾ ಆಜಾದ್ ಆಂಗ್ಲ ಮಾಧ್ಯಮ ಶಾಲೆಯ ಮುಖ್ಯಗುರುಗಳಿಂದ ಹೆಚ್ಚುವರಿ ಶುಲ್ಕ ವಸೂಲಿ ಆರೋಪ !

ಜನವಾದಿ ವಾರ್ತೆ

ರಾಯಚೂರು ಮೇ 7– ಈಗಾಗಲೇ ಕಳೆದ ಮೇ.2 ರಂದು ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯಮಾಪನ ಮಂಡಳಿ ಎಸ್. ಎಸ್.ಎಲ್.ಸಿ ಫಲಿತಾಂಶವನ್ನು ಘೋಷಿಸಿತ್ತು. ಈ ವೇಳೆ ವಿವಿಧ ಕಾರಣಾಂತರದಿಂದ ಪರೀಕ್ಷೆ –1 ರಲ್ಲಿ ಉತ್ತಮ ಅಂಕ ಪಡೆಯದ ವಿದ್ಯಾರ್ಥಿಗಳಿಗೆ ಹಾಗೂ ನಪಾಸಾದ ವಿದ್ಯಾರ್ಥಿಗಳಿಗೆ

ಪರೀಕ್ಷೆ –2 ನ್ನು ಮಂಡಳಿಯು ಮೇ26 ರಿಂದ ಜೂನ್ 2 ರವರೆಗೆ ನಡೆಸಲು ನಿರ್ಧರಿಸಿದೆ. ಈ ಪರೀಕ್ಷೆ ಇಲಾಖೆಯು ಯಾವುದೇ ರೀತಿಯ ಶುಲ್ಕ ವಿರುವುದಿಲ್ಲ ಎಂದು ಅಧಿಕೃತವಾಗಿ ಇಲಾಖೆಯಿಂದ ಸುತ್ತೋಲೆ ಹೊರಡಿಸಿದೆ.



ಎಸ್‌ಎಸ್‌ಎಲ್‌ಸಿ ಪರೀಕ್ಷೆ-2 ಇದೇ ಮೇ 26ರಿಂದ ಜೂನ್ 2ರವರೆಗೆ ನಡೆಯಲಿದೆ. ಮುಖ್ಯ ಪರೀಕ್ಷೆಯಲ್ಲಿ ಫೇಲ್ ಆದವರು, ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವವರು ಹಾಗೂ ಖಾಸಗಿಯಾಗಿ ಮತ್ತೆ ಪರೀಕ್ಷೆ ತೆಗೆದುಕೊಳ್ಳುವವರು ಮೇ 10ರೊಳಗೆ ನೋಂದಣಿ ಮಾಡಿಕೊಳ್ಳುವಂತೆ ಇಲಾಖೆ ತಿಳಿಸಿದೆ.

ಪರೀಕ್ಷೆ-1ರಲ್ಲಿ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಪರೀಕ್ಷಾ ಶುಲ್ಕ ಇರುವುದಿಲ್ಲ. ಆದರೆ ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವವರು ಶುಲ್ಕ ಪಾವತಿಸಬೇಕು ಎಂದು ಹೇಳಲಾಗಿತ್ತು. ಆದರೆ ಪರೀಕ್ಷೆಯಲ್ಲಿ ತೇರ್ಗಡೆಯಾಗದ ಅಥವಾ ಈಗ ಪಡೆದಿರುವ ಅಂಕಗಳಿಗಿಂತ ಇನ್ನೂ ಉತ್ತಮ ಅಂಕ ಗಳಿಸಲು ಇಚ್ಛಿಸುವ ವಿದ್ಯಾರ್ಥಿಗಳಿಗೆ ಯಾವುದೇ ಹೆಚ್ಚುವರಿ ಶುಲ್ಕ ವಿಧಿಸದೆ, ಮತ್ತೊಮ್ಮೆ ಪರೀಕ್ಷೆ ಬರೆಯುವ ಅವಕಾಶ ನೀಡುವುದಾಗಿ ಸಿದ್ದರಾಮಯ್ಯ ಅವರು ಸ್ಪಷ್ಟಪಡಿಸಿದ್ದಾರೆ.



ಆದರೆ ನಗರದ ಹಾಷ್ಮೀಯಾ ಕಂಪೌಂಡ್ ನಲ್ಲಿರುವ ಮೌಲಾನ್ ಅಜಾದ್ ಮಾದರಿ ಇಂಗ್ಲೀಷ್ ಮಾಧ್ಯಮ ಶಾಲೆಯ ಮುಖ್ಯಗುರುಗಳಾದ ಸುಗೂರೇಶ್ ಹಿರೇಮಠ ಅವರು ಮಾತ್ರ ನಾಪಾಸಾದ ಹಾಗೂ ಫಲಿತಾಂಶ ಉತ್ತಮ ಪಡಿಸಿಕೊಳ್ಳಲು ಪರೀಕ್ಷೆ –2 ಕ್ಕೆ ರಿಜಿಸ್ಟ್ರೇಜನ್ ಮಾಡಿಕೊಳ್ಳಲು ವಿದ್ಯಾರ್ಥಿಗಳಿಂದ ಹಣ ವಸೂಲಿ ಮಾಡುವ ಆರೋಪ ಕೇಳಿಬಂದಿದೆ.

ಖುದ್ದು ಶಾಲೆಯ ಮುಖ್ಯಗುರುಗಳು ವಿದ್ಯಾರ್ಥಿಗಳ ಅನುಕೂಲಕ್ಕಾಗಿ ರಚನೆ ಮಾಡಿರುವ ವ್ಯಾಟ್ಸಪ್ ಗ್ರೂಪ್ ನಲ್ಲಿ ಒಂದು ವಿಷಯಕ್ಕೆ 550 ರೂ. ಎರಡು ವಿಷಯಕ್ಕೆ 650 ರೂ. 3 ಹಾಗೂ ಮೂರಕ್ಕಿಂತ ವಿಷಯಗಳಿಗೆ 750 ರೂಪಾಯಿ, ಮಕ್ಕಳ ಪರೀಕ್ಷೆ 1 ರ ಫಲಿತಾಂಶದ ಫೋಟೋಕಾಪಿ, ಪ್ರವೇಶಪತ್ರ, ಒಂದು ಭಾವಚಿತ್ರ, ವಿದ್ಯಾರ್ಥಿಗಳ ಸಹಿ ಅಗತ್ಯವಿದೆ ಎಂದು ಗ್ರೂಪ್‌ಗೆ ಹಾಕಲಾಗಿದೆ. ಈ ಕುರಿತಂತೆ ವಿದ್ಯಾರ್ಥಿಗಳ ಪೋಷಕರ ಪ್ರಶ್ನಿಸಿದರು ಕೂಡ ವಸೂಲಿಗೆ ಮುಂದಾಗಿದ್ದಾರೆಂಬ ಆರೋಪ ಕೇಳಿಬಂದಿದೆ.

ಈ ಕುರಿತಂತೆ ಕಳೆದ ಎರಡು ದಿನದಿಂದ ಶಾಲೆಯ ಮುಖ್ಯಗುರುಗಳಾದ ಶರಣಯ್ಯ ಹಿರೇಮಠ ಅವರಿಗೆ ದೂರವಾಣಿ ಕರೆಗೂ ಸಹ ಸಿಕ್ಕಿಲ್ಲ. ಒಟ್ಟಿನಲ್ಲಿ ಈ ಕುರಿತಂತೆ ಶಿಕ್ಷಣ ಇಲಾಖೆಯ ಅಧಿಕಾರಿಗಳು ಈ ಕುರಿತಂತೆ ಕ್ರಮಜರುಗಿಸು ಬಡ ಮಕ್ಕಳಿಗೆ ಅನುಕೂಲ ಮಾಡಿಕೊಡಬೇಕೆಂದು ಪೋಷಕರ ಆಗ್ರಹವಾಗಿದೆ.

# ಅದ್ದೂರಿಯಾಗಿ ಕನ್ನಿಕಾ ಪರಮೇಶ್ವರಿ ಜಯಂತಿ ಆಚರಣೆ

ಜನವಾದಿ ವಾರ್ತೆ

ಸಿರವಾರ ಏ 07– ಪಟ್ಟಣದ ಆರ್ಯವೈಶ್ಯ ಸಮಾಜದ ವತಿಯಿಂದ ಕನ್ನಿಕಾ ಪರಮೇಶ್ವರಿ ಮಾತೆಯ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲಾಯಿತು.

ಬಯಲು ಆಂಜನೇಯ ದೇವಸ್ಥಾನದಿಂದ, ಮರಾಠ ರಸ್ತೆಯಲ್ಲಿರುವ ಶ್ರೀ ವೆಂಕಟೇಶ್ವರ ದೇವಸ್ಥಾನದವರೆಗೆ ಕನ್ನಿಕಾ ಪರಮೇಶ್ವರ ಭಾವಚಿತ್ರ ಮೆರವಣಿಗೆಯು ಕುಂಭ, ಕಳಸ ಡೊಳ್ಳು, ಬಾಜಾ ಭಜಂತ್ರಿಯೊಂದಿಗೆ ಸಂಭ್ರಮದಿಂದ ನಡೆಯಿತು.

ಕುಂಕುಮಾರ್ಚನೆ, ತೊಟ್ಟಿಲು ಸೇವೆ ಮಹಾಮಂಗಳಾರತಿ ಸೇವೆ ಸೇರಿದಂತೆ ವಿವಿಧ ಧಾರ್ಮಿಕ ಕೈಂಕರ್ಯಗಳನ್ನು ಪೂರೈಸಲಾಯಿತು.



ಆರ್ಯವೈಶ್ಯ ಸಮಾಜದ ಅಧ್ಯಕ್ಷ ಎಂ.ಪರಮೇಶ್ವರ ಶೆಟ್ಟಿ, ಗೌರವಾಧ್ಯಕ್ಷ, ಎಂ.ನರಸಿಂಹಯ್ಯಶೆಟ್ಟಿ. ಉಪಾಧ್ಯಕ್ಷರಾದ, ಎಂ ಶೇಷಯ್ಯ ಶೆಟ್ಟಿ, ಎಂ ಸೂರ್ಯಪ್ರಕಾಶ್ ಶೆಟ್ಟಿ, ಮುರಾರಿ ಕೃಷ್ಣಮೂರ್ತಿ ಶೆಟ್ಟಿ, ಕಾರ್ಯದರ್ಶಿ, ಎಂ ಮಾಣಿಕ ಶೆಟ್ಟಿ, ಖಜಾಂಚಿ,ಹಿರಿಯ ಸಲಹೆಗಾರರು, ಆರ್ ಜಯರಾಮ ಶೆಟ್ಟಿ, ಚನ್ನಕೇಶವ ಶೆಟ್ಟಿ, ಕಿಷ್ಣಯ್ಯ ಶೆಟ್ಟಿ, ದೇವಣ್ಣ ಶೆಟ್ಟಿ ನವಲಕಲ್, ಅಮರಯ್ಯ ಶೆಟ್ಟಿ,ಸಂಘಟನಾ ಕಾರ್ಯದರ್ಶಿ ಹನುಮಂತಯ್ಯ ಶೆಟ್ಟಿ, ಅಶೋಕ್ ಶೆಟ್ಟಿ, ದತ್ತಾತ್ರೇಯ ಶೆಟ್ಟಿ,ಬಿ.ವೆಂಕಟೇಶ್ ಶೆಟ್ಟಿ,ದೇವೇಂದ್ರ ಶೆಟ್ಟಿ,ರಮೇಶ್ ಶೆಟ್ಟಿ,ವೀರೇಂದ್ರ ಶೆಟ್ಟಿ. ರವಿಕುಮಾರ್ ಶೆಟ್ಟಿ, ಮಂಜುನಾಥ ಶೆಟ್ಟಿ ಅತನೂರು, ಕ.ಗುರು ಕಿರಣ್ ಶೆಟ್ಟಿ. ಭೀಮಯ್ಯ ಶೆಟ್ಟಿ. ವಿಕಾಸ್ ಶೆಟ್ಟಿ. ಟಿ ಭೀಮೇಶ ಶೆಟ್ಟಿ. ಹನುಮಂತಯ್ಯ ಶೆಟ್ಟಿ ಮಸ್ತಾಪುರ್. ಗಿರಿಯಪ್ಪ ಶೆಟ್ಟಿ. ಪ್ರಶಾಂತ ಶೆಟ್ಟಿ. ಅನಿಲ್ ಕುಮಾರ್ ಶೆಟ್ಟಿ,ಗಿರೀಶ ಶೆಟ್ಟಿ,ಶ್ರೀಧರ್ ಶೆಟ್ಟಿ, ಮಸ್ತಾಪುರ್,ಸುನಿಲ್ ಕುಮಾರ್ ಶೆಟ್ಟಿ,ಮಣಿಕಂಠ ಶೆಟ್ಟಿ,ವಿಕಾಸ್ ಶೆಟ್ಟಿ,ವಿಶೇಷವಾಗಿ ಶ್ರೀವಾಸವಿ ಮಹಿಳಾ ಮಂಡಳಿ, ಯುವ ಮಂಡಳಿ ಸೇ–ರಿದಂತೆ ಅನೇಕರು ಇದ್ದರು.

# ಅಧಿಕಾರಿಗಳ ತಂಡ ಭೇಟಿ – ಪರಿಶೀಲನೆ

ಜನವಾದಿ ವಾರ್ತೆ

ಮುದಗಲ್ ಮೇ 7– ಪಟ್ಟಣ ಉಪ್ಪಾರನಂದಿಹಾಳ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ 2021–22ನೇ ಸಾಲಿನ ಬಸವ ವಸತಿ ನಿಗಮದಿಂದ 150 ಮನೆಗಳ ಮಂಜೂರಾತಿ ಹಿನ್ನೆಲೆಯಲ್ಲಿ ಚಿಕ್ಕ ಲೆಕ್ಕಿಹಾಳ ಹಾಗೂ ದೊಡ್ಡ ಲೆಕ್ಕಿಹಾಳ ಗ್ರಾಮಗಳಲ್ಲಿ ಗ್ರಾಮ ಸಭೆ ನಡೆಸದೇ ಮನೆಗಳನ್ನು ಹಂಚಿಕೆ ಮಾಡಲಾಗಿದೆ ಎಂದು ನಿಗಮಕ್ಕೆ ದೂರು ನೀಡಿದ್ದರ ಹಿನ್ನೆಲೆಯಲ್ಲಿ ನಿಗಮವು ನಿಯೋಜಿಸಿದ ಅಧಿಕಾರಿಗಳ ತಂಡ ಭೇಟಿ ನೀಡಿ ಪರಿಶೀಲನೆ ಮಾಡಿದರು

ಉಪ್ಪಾರ ನಂದಿಹಾಳ ಗ್ರಾಮ ಪಂಚಾಯತಿ ಆಗಮಿಸಿದ ತನಿಖಾ ತಂಡದ ಅಧಿಕಾರಿಗಳಾದ ಮೀನುಗಾ–ರಿಕೆ ಇಲಾಖೆಯ ಉಪ ನಿರ್ದೇಶಕ ಬಸನಗೌಡ ಮತ್ತು ಸಮಾಜ ಕಲ್ಯಾಣ



ಇಲಾಖೆ ಉಪನಿರ್ದೇಶಕ ಚಿದಾನಂದ ಅವರು ವಸತಿ ಯೋಜನೆಯ ಕಡಗಳನ್ನು ಪರಿಶೀಲಿಸಿದರು. ಕಡತಗಳ ಪರಿಶೀಲನೆಯಲ್ಲಿ ಸಮರ್ಪಕವಾಗಿರದೇ ಇರುವದರಿಂದ ಗ್ರಾಮ ಸಭೆ ನಡೆಸಿದಿ ವಿಡಿಯೋ, ದಾಖಲೆಗಳನ್ನು ಕೇಳಿದಾಗ ಜಿಲ್ಲಾ ಪಂಚಾಯತಿಗೆ ಕಳಿಸಲಾಗಿದೆ ಎಂದು ಹೇಳಿದರು. ಸಿಡಿಯನ್ನು ಸಲ್ಲಿಸಲು ಅಧಿಕಾರಿಗಳಿಗೆ ಸೂಚಿಸಿದರು. ಅಲ್ಲದೇ ಮನೆಗಳ ವಿತರಣೆಗೆ ನಿಗಮವು ನೀಡಿದ ಮಾನದಂಡದ ಆದೇಶವನ್ನು ಸಲ್ಲಿಸಬೇಕೆಂದು ಸೂಚಿಸಿದರು.

ಲೆಕ್ಕಿಹಾಳ ಗ್ರಾಮಕ್ಕೆ ಅಧಿಕಾರಿಗಳು ತೆರಳಿ ಮನೆಗಳನ್ನು ನಿವೇಶನವನ್ನು ಪರಿಶೀಲಿಸಿ ದಾಖಲೆಗಳನ್ನು ಪಡೆದರು. ಗ್ರಾಮದಲ್ಲಿ ಫಲಾಭವಿಗಳು ದೂರುದಾರರ ಮಧ್ಯೆ ಅಲ್ಲಲ್ಲಿ ಮಾತಿನ ವಾಗ್ವಾದವೂ ನಡೆಯಿತು.

ಗ್ರಾಮದಲ್ಲಿ ಮನೆಗಳು ಇದ್ದವರೇ ಪದೇ ಪದೇ ಪಡೆದುಕೊಳ್ಳುತ್ತಿರುವದು ಸರ್ವೆ ಸಾಮಾನ್ಯವಾಗಿದೆ. ಆದರೆ ಅವಶ್ಯಕತೆ ಇದ್ದವರಿಗೆ ಮನೆಗಳನ್ನು ಕಳೆದ ಹತ್ತಾರು ವರ್ಷಗಳಿಂದ ಇದು ನಿರಂತರವಾಗಿ ನಡೆಯುತ್ತಿದೆ. ರಾಜ–ಕಾರಣದಲ್ಲಿ ಚೀಲ ಹಿಡಿದವರಿಗೆ ಪದೇ ಪದೇ ಮನೆಗಳನ್ನು ವಿತರಿಸಲಾಗುತ್ತಿದೆ. ಅರ್ಹತೆ ಇದ್ದ ಫಲಾನುಭವಿಗಳಿಗೆ ಮನೆಗಳ ವಿತರಣೆಯಲ್ಲಿ ಜನಪ್ರತಿನಿಧಿಗಳು, ಗ್ರಾಮ ಪಂಚಾಯತಿ ಅಧಿಕಾರಿಗಳು ಸಂಪೂರ್ಣ ವಿಫಲರಾಗಿದ್ದಾರೆ. ತಪ್ಪಿತಸ್ಥರ ಮೇಲೆ ಕಾನೂನು ಕ್ರಮ ಜರುಗಿಸಬೇಕು ಎಂದು ರೇಣುಕಮ್ಮ ಗಂ. ಹನುಮಂತ ಲೆಕ್ಕಿಹಾಳ ಗದ್ದೆಪ್ಪ ಅಯ್ಯಪ್ಪ ಲೆಕ್ಕಿಹಾಳ ಹನುಮಂತ ಗುರಿಕಾರ ಲೆಕ್ಕಿಹಾಳ. ಗದ್ದೆಪ್ಪ ಗಡ್ಡಿ ಒತ್ತಾಯಿಸಿದರು

# ಪರಿಸರ .ಸ್ವಚ್ಛತೆ ಹಾಗೂ ನೈರ್ಮಲ್ಯದ ಬಗ್ಗೆ ಗ್ರಾಮಸ್ಥರಲ್ಲಿ ಜಾಗೃತಿ ಮೂಡಿಸಿ – ಫಾ.ವಿನೋದ್ ಪೌಲ್




ಜನವಾದಿ ವಾರ್ತೆ

ಮಾನ್ವಿ ಮೇ 7– ಎನ್.ಎಸ್.ಎಸ್. ಶಿಬಿರಾರ್ಥಿಗಳು ಗ್ರಾಮದಲ್ಲಿದ್ದು ಕೊಂಡು ಗ್ರಾಮೀಣ ಜೀವನವನ್ನು ಸೂಕ್ಷ್ಮವಾಗಿ ತಿಳಿದುಕೊಳ್ಳುವುದಕ್ಕೆ ಒಂದು ಉತ್ತಮವಾದ ಅವಕಾಶವನ್ನು ಕಲ್ಪಿಸುತ್ತದೆ ಗ್ರಾಮೀಣ ಭಾಗದ ಜೀವನವನ್ನು ವಿದ್ಯಾರ್ಥಿಗಳು ತಿಳಿದುಕೊಳ್ಳುವುದರ ಜೋತೆಗೆ ಗ್ರಾಮಸ್ಥರಿಗೆ ಪರಿಸರ .ಸ್ವಚ್ಛತೆ ಹಾಗೂ ನೈರ್ಮಲ್ಯದ ಬಗ್ಗೆ ಜಾಗೃತಿ ಮೂಡಿಸುವಂತೆ ಲೊಯೋಲಾ ಕಾಲೇಜಿನ ಪ್ರಾಂಶುಪಾಲರಾದ ಫಾ.ವಿನೋದ್ ಪೌಲ್ ತಿಳಿಸಿದರು.

ತಾಲೂಕಿನ ಜಾಗೀರ ಪನ್ನೂರ ಗ್ರಾಮದಲ್ಲಿನ ಕಾಪಿಪಲಾಡಿ ಶಾಲೆಯಲ್ಲಿ ಲೊಯೋಲಾ ಕಾಲೇಜು ಮಾನವಿ ಹಾಗೂ ಐ.ಕ್ಯೂ.ಎ.ಸಿ.ಯ ಸಂಯುಕ್ತಾಶ್ರಯದಲ್ಲಿ ನಡೆದ ಏಳು ದಿನಗಳ 2024–25 ನೇ ಸಾಲಿನ ರಾಷ್ಟ್ರೀಯ ಸೇವಾ ಯೋಜನಾ ವಾರ್ಷಿಕ ವಿಶೇಷ ಶಿಬಿರವನ್ನು ಉದ್ಘಾಟಿಸಿ ಮಾತನಾಡಿ ಲೊಯೋಲಾ ಕಾಲೇಜು ವತಿಯಿಂದ ತಾಲೂಕಿನ ಜಾಗೀರ ಪನ್ನೂರ ಗ್ರಾಮವನ್ನು ಎನ್.ಎಸ್.ಎಸ್. ಶಿಬಿರದ ಅಂಗವಾಗಿ ದತ್ತು ಗ್ರಾಮವಾಗಿ ಆಯ್ಕೆ ಮಾಡಿಕೊಳ್ಳಲಾಗಿದೆ

ಕಾಲೇಜಿನ ವಿದ್ಯಾರ್ಥಿನಿ ಶಶಿಕಲಾ ಎನ್.ಎಸ್. ಎಸ್. ಪ್ರತಿಜ್ಞಾ ವಿಧಿಯನ್ನು ಭೋದಿಸಿದರು ವಿದ್ಯಾರ್ಥಿಗಳು ಎನ್.ಎಸ್.ಎಸ್ ಗೀತೆಯನ್ನು ಹಾಡಿದರು ಮತ್ತು ಪರಿಸರದ ಕುರಿತು ಕಿರು ನಾಟಕವನ್ನು ಪ್ರದರ್ಶಿಸಿದರು.

ಕಾರ್ಯಕ್ರಮದಲ್ಲಿ ಸಿಸ್ಟರ್ ಲೀನಾ ಪಯಾಸ್, ಗ್ರಾಮದ ಮುಖಂಡರಾದ ಅಬ್ರಹಾಂ, ಕಾರ್ಯಕ್ರಮದ ಸಂಯೋಜಕರಾದ ಖಾಸೀಂ ಸೇರಿದಂತೆ ಕಾಲೇಜಿನ ವಿದ್ಯಾರ್ಥಿಗಳು ಇದ್ದರು.

ಎನ್.ಎಸ್.ಎಸ್. ಶಿಬಿರದಲ್ಲಿ 42 ಸ್ವಯಂ ಸೇವಕರು ಭಾಗವಹಿಸಿದರು.

# ಎರಡನೇ ದೀಪಾವಳಿ, ಭಾರತೀಯರ ಸಿಂಧೂರಕ್ಕೆ ಕೈ ಹಾಕಿದ್ದಕ್ಕೆ ತಕ್ಕ ಶಾಸ್ತಿ : ಡಾ.ನಾಗರಾಜ್ ಬಾಲ್ಕಿ




ಜನವಾದಿ ವಾರ್ತೆ

ರಾಯಚೂರು ಮೇ 7– ಇಂದು ನಮಗೆ ಎರಡನೇ ದೀಪಾವಳಿ,ಭಾರತೀಯರ ಸಿಂಧೂರಕ್ಕೆ ಕೈ ಹಾಕಿದ್ದಕ್ಕೆ ತಕ್ಕ ಶಾಸ್ತಿಯಾಗಿದೆ ಎಂದು ಬಿಜೆಪಿ ಮುಖಂಡರಾದ ಡಾ.ನಾಗರಾಜ ಬಾಲ್ಕಿಯವರು ತಿಳಿಸಿದರು.

ಅವರಿಂದು ಬಾಲ್ಕಿ ಆಸ್ಪತ್ರೆಯಲ್ಲಿ ಪಹಲ್ಗಾಮ್ ದಾಳಿಗೆ ಭಾರತೀಯ ಸೇನೆ ಪ್ರತೀಕಾರ ತೆಗೆದುಕೊಂಡ ಕಾರಣಕ್ಕೆ ಆಸ್ಪತ್ರೆಯ ಸಿಬ್ಬಂದಿಗಳೊಂದಿಗೆ ಕೇಕ್ ಕತ್ತರಿಸಿ ಸಂಭ್ರಮಾಚರಿಸಿ ಮಾತನಾಡಿದವರು

ಮೋದಿ ಕೊಟ್ಟ ಮಾತು ತಪ್ಪೋದಿಲ್ಲ ಎಂಬ ನಂಬಿಕೆ ಇತ್ತು. ಭಾರತೀಯ ಸೇನೆ ಮೇಲೂ ಅಪಾರವಾದ ನಂಬಿಕೆ ಇತ್ತು. 71ರಲ್ಲಿ ಯುದ್ಧ ಗೆದ್ದಿ, ಆದರೆ ಸಂಧಾನದಲ್ಲಿ ಸೋತಿದ್ದೆವು. ಭಾರತಮಾತೆ, ಸಹೋದರಿ ಸಿಂಧೂರ ಅಳಿಸಲು ಬಂದವರನ್ನು ಅಳಿಸಿದ್ದೇವೆ ಎಂದರು.

ಸಿಂಧೂರ ಎಂಬ ಹೆಸರಿಗೆ ಮೋದಿ, ಸೇನೆ ಬೆಲೆ ತಂದುಕೊಟ್ಟಿದ್ದಾರೆ. ಶತ್ರುಗಳನ್ನು ಪೂರ್ಣ ನಿರ್ನಾಮ ಮಾಡಿ, ನಿಮ್ಮ ಜೊತೆ ನಾವಿದ್ದೇವೆ. ಒಂದು ಸಲ ಅವರನ್ನು ಸಂಪೂರ್ಣವಾಗಿ ಮುಗಿಸಬೇಕು ಎಂದು ತಿಳಿಸಿದರು.

ಈ ಸಂದರ್ಭದಲ್ಲಿ ಡಾ.ಪ್ರಿಯಾ ಬಾಲ್ಕಿ ಸೇರಿದಂತೆ ಆಸ್ಪತ್ರೆಯ ಸಿಬ್ಬಂದಿಗಳು ಉಪಸ್ಥಿತರಿದ್ದರು.

# ವಿಶೇಷ ಚೇತನ, ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ – ಸಂಗಮೇಶ

ಜನವಾದಿ ವಾರ್ತೆ



ಮುದಗಲ್ ಮೇ 7– ಪ್ರಸಕ್ತ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಚೇತನ ಈರಪ್ಪ 598 ಅಂಕ ಪಡೆದು ಶಾಲೆಗೆ ಪ್ರಥಮ ಸ್ಥಾನ ಪಡೆದಿದ್ದಾನೆ. ಕಳೆದ 12 ವರ್ಷಗಳಿಂದ ಶಾಲೆಯು ಉತ್ತಮ ಫಲಿತಾಂಶ ಪಡೆಯುತ್ತಿರುವದು ಹೆಮ್ಮೆಯ ವಿಷಯವಾಗಿದೆ. ವಿಶೇಷವಾಗಿ ಶಾಲೆಯಲ್ಲಿ ಪ್ರವೇಶ ಪಡೆದ ವಿಶೇಷ ಚೇತನ ಮತ್ತು ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ ಕೊಡುವದರ ಜೊತೆಗೆ ಎಸ್ಎಸ್ಎಲ್ಸಿ ಯಲ್ಲಿ ಅತೀ ಹೆಚ್ಚು ಅಂಕ ಪಡೆದ ಬಡ ವಿದ್ಯಾರ್ಥಿಗಳ ಮುಂದಿನ ವಿದ್ಯಾಭ್ಯಾಸಕ್ಕೆ ಕೂಡ ಸಂಸ್ಥೆಯ ನೆರವಾಗುತ್ತಿದೆ ಸಂಸ್ಥೆಯ ಕಾರ್ಯದರ್ಶಿಯಾದ ಸಂಗಮೇಶ ಸರಗಣಾಚಾರಿ ಹೇಳಿದರು.

ಅವರು ಪತ್ರಿಕಾ ಭವನದಲ್ಲಿ ಕರೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು ಸಂಸ್ಥೆಯು ಕಳೆದ 12 ವರ್ಷಗಳಿಂದ ಉತ್ತಮ ಫಲಿತಾಂಶವನ್ನು ಪಡೆಯುತ್ತಿದೆ. ಇದಕ್ಕೆ ಶಿಕ್ಷಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ಪರಿಶ್ರಮವಿದೆ ಎಂದರು. ಅಲ್ಲದೇ ಸಂಸ್ಥೆಯು ಕ್ರೀಡೆ, ಸಾಂಸ್ಕೃತಿಕ ಚಟುವಟಿಕೆಯಲ್ಲಿ ತನ್ನದೇ ಆದ ಛಾಪು ಮೂಡಿಸಿ ರಾಜ್ಯ ಮಟ್ಟದಲ್ಲಿ ಹೆಸರನ್ನು ತಂದಿರುವದು ಹೆಮ್ಮೆಯ ವಿಷಯ. ಪ್ರಸಕ್ತ ಸಾಲಿನ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ 54 ವಿದ್ಯಾರ್ಥಿಗಳಲ್ಲಿ 32 ವಿದ್ಯಾರ್ಥಿಗಳು ಉತ್ತೀರ್ಣರಾಗಿದ್ದಾರೆ.

ಸಂಸ್ಥೆಯಲ್ಲಿ ಎಸ್ಎಸ್ಎಲ್ಸಿ ಪರೀಕ್ಷೆಯಲ್ಲಿ ಹೆಚ್ಚು ಅಂಕ ಗಳಿಸಿದ ಬಡ ವಿದ್ಯಾರ್ಥಿಗಳಿಗೆ ಹೆಚ್ಚಿನ ವಿದ್ಯಾಭ್ಯಾಸದ ಮಾರ್ಗದರ್ಶನ ಮತ್ತು ಅವರಿಗೆ ಹಣಕಾಸಿನ ಶುಲ್ಕದ ನೆರವನ್ನು ನೀಡಲಿದೆ. ವಿಶೇಷ ಚೇತನ ಮತ್ತು ಅನಾಥ ಮಕ್ಕಳಿಗೆ ಉಚಿತ ಶಿಕ್ಷಣ ನೀಡಲಿದೆ ಎಂದರು. ಈ ಸಮಯದಲ್ಲಿ ಶಿಕ್ಷಕರಾದ ತಿಪ್ಪಣ್ಣ ಇದ್ದರು.

# ಅಂದು ಸಿಂಧೂರ ಅಳಿಸಿದ ಪಾಕ ಪ್ರೇರಿತ ದುಷ್ಕರ್ಮಿಗಳಿಗೆ ಇಂದು ಸಿಂಧೂರ ಆಪರೇಷನ್‌ದಿಂದ ತಕ್ಕ ಶಿಕ್ಷೆ ನೀಡಿದ ಭಾರತ

ಭಾರತೀಯ ಸೇನೆಯ ಕರ್ನಲ್ ಸೋಫಿಯಾ ಖುರೇಷಿ, ವಾಯುಪಡೆಯ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ನೇತೃತ್ವದಲ್ಲಿ ನಮ್ಮ ಸೈನ್ಯದ ತಂಡ ಪಾಕ ಆಕ್ರಮಿತ ಜಮ್ಮು ಕಾಶ್ಮೀರ 5 ಪಾಪಿ ಪಾಕಿಸ್ತಾನದ ಒಳಗಿನ 4 ನೆಲೆಗಳು ಸೇರಿದಂತೆ ಒಟ್ಟು 9 ಭಯೋತ್ಪಾದನಾ ನೆಲೆಗಳನ್ನು ಎಐ ಸಂಚಾಲಿತ ದ್ರೋಣಗಳಿಂದ ಯಶಸ್ವಿಯಾಗಿ ಉಡಾಯಿಸಿ ನಾಶ ಮಾಡಿ ಮರಳಿ ಬಂದದ್ದು ಭಾರತೀಯ ಸೈನ್ಯದ ಶಕ್ತಿಯಾಗಿದೆ. ಭಾರತದ ಸೇನೆ ಕೇವಲ 20–25 ನಿಮಿಷಗಳಲ್ಲಿ ಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಒಟ್ಟಾಗಿ ಪಾಕಿಸ್ತಾನದ ಒಳಗೆ ಸುಮಾರು 100 ಕಿ.ಮಿ ನುಗ್ಗಿ ಸುರಕ್ಷಿತವಾಗಿ ಮರಳಿದ್ದು ಕಂಡು ಪಾಕಿಸ್ತಾನ ಥರಗುಟ್ಟುತ್ತಿದೆ.




ಏಪ್ರಿಲ್ 22, 2025ರಂದು ಪಹಲ್ಗಾಮ್ ಭಯೋತ್ಪಾದಕ ದಾಳಿಯ ರೂವಾರಿ ಜೈಷ್ ಎ ಮೊಹ್ಮದ ಸಂಘಟನೆಯ ಭಯೋತ್ಪಾದಕರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುವ ಪ್ರಮುಖ ಕೇಂದ್ರವಾದ ಬಿಲಾಲ್ ಭಯೋತ್ಪಾದಕ ಶಿಬಿರದ ಮುಖ್ಯಸ್ಥ ಭಾರತೀಯ ಮಹಿಳೆಯರ ಸಿಂಧೂರ ಅಳಿಸಿದ ಯಾಕೂಬ ಮುಘಲ್ "ಆಪರೇಶನ್ ಸಿಂಧೂರ"ನಲ್ಲಿ ಹತನಾಗಿದ್ದಾನೆ. ಅವನ ಅಂತ್ಯಕ್ರಿಯೆಲ್ಲಿ ಪಾಕಿಸ್ತಾನದ ಐಎಸ್ ಐ ಮತ್ತು ಪೋಲಿಸ ಸಿಬ್ಬಂದಿ ಭಾಗವಹಿಸಿದ್ದು ಪಾಕ ಸರ್ಕಾರ ಭಯೋತ್ಪಾದಕರಿಗೆ ಬೆಂಬಲ ನೀಡುತ್ತಿದೆ ಎನ್ನುವುದಕ್ಕೆ ಸಾಕ್ಷಿಯಾಗಿದೆ. ಫೆ 14 2019ರ ಪುಲ್ವಾಮಾದಾಳಿಯ ಮತ್ತು ಸಂಸತ್ ದಾಳಿ, ಅಯೋಧ್ಯೆಯ ರಾಮ ಮಂದಿರದ ದಾಳಿಯ ಪ್ರಮುಖ ರೂವಾರಿಯಾಗಿದ್ದ ಜೈಶ್ ಎ ಮೊಹ್ಮಮದ್‌ನ 18 ಎಕರೆಗಿಂತ ಹೆಚ್ಚು ವಿಸ್ತಾರವಾದ ಪ್ರದೇಶದಲ್ಲಿದ್ದ ಗಡಿಯಿಂದ 100 ಕಿ.ಮಿ. ದೂರದ ಬಹವಲ್ಪುರದ ಪ್ರಧಾನ ಕಚೇರಿ ಉಡಾಯಿಸಲಾಗಿದೆ. ಅದರ ಮುಖ್ಯಸ್ಥ ಮಸೂದ ಅಜರ್ ಕುಟುಂಬದ 10 ಸದಸ್ಯರು ಮತ್ತು ನಾಲ್ವರು ಸಹಾಯಕರು ಸಾವನ್ನಪ್ಪಿದ್ದಾರೆ ಎಂದು ಬಿಬಿಸಿ ಉರ್ದು ಚಾನೆಲ್ ವರದಿ ಮಾಡಿದೆ. ಜೈಷ್ ಎ ಮೊಹ್ಮದ (ಜೆಇಎಂ) , ಲಷ್ಕರ ಎ ತೈಬಾ (ಎಲ್‌ಇಟಿ), ಹಿಜಬುಲ್ ಮುಜಾಹಿದ್ದೀನ್ ಸಂಬಂಧಿಸಿದ 80ಕ್ಕೂ ಹೆಚ್ಚು ಭಯೋತ್ಪಾದಕರು ದಾಳಿಯಲ್ಲಿ ಹತರಾಗಿದ್ದಾರೆಂದು ಇಂಡಿಯಾ ಟುಡೆ ವರದಿ ಮಾಡಿದೆ. ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತಿಯಾಗಿ "ಮುಟ್ಟಲು ಬಂದರೆ ಮೆಟ್ಟಿ ಹೊಡೆಯುವೆವು" ಎಂದು ಗೃಹಮಂತ್ರಿಯ ಹೇಳಿದಂತೆ ಗಡಿನಿಯಂತ್ರಣರೇಖೆಯಿಂದ 30 ಕಿ.ಮಿ. ದೂರದ ಎಲಿಟಿ ಕ್ಯಾಂಪ್ ಮುರಿಡ್ಕೆ , 35 ಕಿ.ಮಿ. ದೂರದ ಪೂಂಚ್ ರಾಜೋರಿ ಪ್ರದೇಶದ ಗುಲ್ಬುರ ನೆಲೆ, 15 ಕಿ.ಮಿ ದೂರದ ಎಲ್‌ಇಟಿ ಕೊಟ್ಲಿ ಶಿಬಿರ, 10 ಕಿ.ಮಿ. ದೂರದ ಎಲ್‌ಇಟಿ ಬರನಾಲಾ ಶಿಬಿರ, 8 ಕಿ.ಮಿ. ದೂರದ ಜೆಇಎಮ್ ಸರಜಲ್ ಶಿಬಿರ, 15 ಕಿ.ಮಿ. ದೂರದ ಹೆಚ್ ಎಂ ಮೆಹಮೂನಾ ಶಿಬರಗಳನ್ನು ಹಾಗೂ 30 ಕಿ.ಮಿ. ಬಿಲಾಲ ಶಿಬಿರ, ಬಹವಲಪುರ ಹಾಗೂ ಎಲ್ ಇಟಿ ಸವಾಯಿ ಶಿಬಿರಗಳು ಸೇರಿದಂತೆ ಒಟ್ಟು. 9ನ್ನು ಧ್ವಂಸ ಮಾಡಲಾಗಿದೆ.

ಮೇ 6, 25ರ ಮಧ್ಯರಾತ್ರಿ ಪ್ರಧಾನಿ ಮೋದಿಯವರ ನೇತೃತ್ವದಲ್ಲಿ ರಾತ್ರಿಯಿಡಿ ಮೇಲ್ವಿಚಾರಣೆಯಲ್ಲಿ ಭಾರತ ಸಂಪೂರ್ಣ ಸಂಯಮದಿಂದ ವರ್ತಿಸಿದೆ. ನಂತರ ಪ್ರಚೋದನಕಾರಿಯಲ್ಲದ ರೀತಿಯಲ್ಲಿ ಭಯೋತ್ಪಾದಕ ಮೂಲ ಸೌಕರ್ಯಗಳ ಮೇಲೆ ಎಚ್ಚರಿಕೆಯಿಂದ ಕೇವಲ 20–25 ನಿಮಿಷಗಳ ದಾಳಿ ನಡೆಸಿ ನೆಲೆಗಳನ್ನು ನಿರ್ನಾಮ ಮಾಡಿದೆ. ರಾಜತಾಂತ್ರಿಕ ರಂಗದಲ್ಲಿ ಸಕ್ರೀಯವಾಗಿದ್ದು ಜಾಗತಿಕ ಬೆಂಬಲಗಳಿಸುವಲ್ಲಿ ಮತ್ತು ಪಾಕಿಸ್ತಾನ ವನ್ನು ಪ್ರತ್ಯೇಕವಾಗಿಸುವಲ್ಲಿ ಯಶಸ್ವಿಯಾಗಿದೆ. 60–80 ಇಳಿವಯಸ್ಸಿನಲ್ಲಿ ಅನೇಕರು ತಮ್ಮ ಜೀವನದ ಅಂತಿಮದಿನಗಳನ್ನು ಸುಖವಾಗಿ ಕಳೆಯ ಬಯಸುತ್ತಾರೆ. ಆದರೆ ಮೋದಿಯವರು ಯಾವುದೇ ಪ್ರತಿಫಲಾಪೇಕ್ಷೆ ಯಿಲ್ಲದೆ, ಸೋಲನ್ನು ಒಪ್ಪಿಕೊಳ್ಳದೆ, ಆಯಾಸಗೊಳ್ಳದೆ, ಹಿಡಿದ ಕೆಲಸವನ್ನು ಪೂರೈಸದೇ ಬಿಡುವುದಿಲ್ಲ. ಅಣ್ಣ ಬಸವಣ್ಣನವರ ವಚನಗಳಲ್ಲಿದ್ದಂತೆ ಬೈಯ್ದವರನ್ನು ಬಂಧುಗಳೆಂದು ಭಾವಿಸುತ್ತ, ಎನಗಿಂತ ಕಿರಿಯರಿಲ್ಲ ಎಂಬ ಭಾವದಿಂದ ಬದುಕುತ್ತಿರುವ ಪ್ರಧಾನಿ ಮೋದಿ ನೇತೃತ್ವದಲ್ಲಿ ಸೋಲಿನ ಸೊಲ್ಲಡಗಿದೆ, ಗೆಲುವಿನ ದನಿ ಗುಡುಗುಡಿಸುತ್ತದೆ. ಭರವಸೆಯ ನಾಳೆಗಳು ನಮ್ಮದಾಗಿವೆ. ಮೋದಿಯವರ ಯಾವುದೇ ನೀತಿಯಲ್ಲಿ ಪ್ರಶ್ನಿಸ ಬಹುದಾದ ಸಣ್ಣ ಸಂಗತಿಗಳಿರಬಹುದು. ಆದರೆ ಭಾರತದ ಸುರಕ್ಷತೆ ವಿಷಯಕ್ಕೆ ಕುರಿತಾದ ಭಾರತ ಬಲವಾಗಿಸುವ ಪ್ರಧಾನಿ ಮೋದಿಯವರ ನೀತಿಗಳು ಅಕ್ಷುಣ್ಯವಾಗಿವೆ. ಪ್ರಶಂಸನೀಯ ವಾಗಿವೆ. ರಾಜಕೀಯ ವಿರೋಧಿಗಳು ಮೆಚ್ಚುವಂತವುಗಳಾಗಿವೆ. ಬುಡದಿಂದ ಭಯೋತ್ಪಾದನೆ ಕಿತ್ತು ಹಾಕುವ ಸಂಕಲ್ಪ ಮಾಡಿದ ಭಾರತದ ಮೋದಿ ನೇತೃತ್ವದ ಕೇಂದಸರ್ಕಾರದ ನೇತೃತ್ವದಲ್ಲಿ ಪರಾಕ್ರಮ ಮೆರೆದ ವೀರ ಧೀರ ಸೈನಿಕರಿಗೆ, ಸೇನಾನಾಯಕರಿಗೆ ಪ್ರತಿ ಭಾರತೀಯರ ಅಭಿನಂದನೆಗಳು.

ಆಗ ಕಾರ್ಗಿಲ್ ದಾಳಿ, ಮುಂಬೈದಾಳಿ, ಸಂಸತ್ ದಾಳಿ ಮುಂತಾದವುಗಳಲ್ಲಿ ತನ್ನ ಕೈವಾಡ ಇಲ್ಲ ಭಯೋತ್ಪಾದಕರ ನೆಲೆಗಳು, ಅಡಗುದಾಣಗಳು ಪಾಕಿಸ್ತಾನದಲ್ಲಿಲ್ಲ ಎಂದು ದಶಕಗಳಿಂದಲೂ ಹೇಳಿಕೆಗಳು ಈಗ ನಿರಸ್ತವಾಗಿವೆ. ಎಲ್ಲ ದೇಶಗಳ ವಿಶ್ವಾಸ ಕಳೆದು ಕೊಂಡಿರುವ ಪಾಕಿಸ್ತಾನ ಬಿದ್ದರೂ ಮೀಸೆ ಮಣ್ಣಾಗಿಲ್ಲ ಎನ್ನುವಂತೆ ಇಂದು ಪಾಕಿಸ್ತಾನ ಗಡಿ ನಿಯಂತ್ರಣ ರೇಖೆಯ ಉದ್ದಕ್ಕೂ ಮಾಡಿದ ಅನಿಯಂತ್ರಿತ ದಾಳಿಯಿಂದಾಗಿ ಪೂಂಚ್ ಜಿಲ್ಲೆಯಲ್ಲಿ 7 ಸಾವು ಮತ್ತು 25 ಜನರು ಗಾಯಗೊಂಡಿರುವ ವರದಿಯಾಗಿದೆ. ಇಂತಹ ಸೂಕ್ಷ್ಮ ಸಂದರ್ಭದಲ್ಲಿ ಪ್ರತಿ ಭಾರತೀಯ ಜಾತಿ ಮತ ಪಂಥ ಪಂಗಡ ಪಕ್ಷ ಪ್ರದೇಶಗಳ ಬೇಧ ಮರೆತು ಕೇಂದ್ರ ಸರ್ಕಾರದ ಕ್ರಮ ಬೆಂಬಲಿಸಬೇಕು. ಇಂದು ಆಪರೇಷನ್ ಸಿಂಧೂರ ಮೆಚ್ಚುಗೆ ವ್ಯಕ್ತಪಡಿಸಲು ಕರೆದ ಪತ್ರಿಕಾಗೋಷ್ಠಿಯಲ್ಲಿ ಕಾಕತಾಳಿಯ ಎಂಬಂತೆ ಕರ್ನಾಟಕದ ಮುಖ್ಯಮಂತ್ರಿಯವರು ಸಿಎಂ ಸಿದ್ದರಾಮಯ್ಯ ಹಣೆಗೆ ಕುಂಕುಮದ ತಿಲಕ ಇಟ್ಟುಕೊಂಡಿದ್ದರು. ಕೇಂದ್ರ ಬೆಂಬಲಿಸಿದ ರಾಜ್ಯಸರ್ಕಾರದ ನಿರ್ಧಾರ ಸ್ವಾಗತಾರ್ಹ. ಹೊರಗಿನ ವಿರೋಧಿ ಅಥವಾ ದ್ರೋಹಿಗಳಷ್ಟೇ ದೇಶದ ಒಳಗಿನ ಹಿತಶತ್ರುಗಳ ಅಪಾಯಕಾರಿ ಅಂತಹವರ ದೇಶವಿರೋಧಿ ಚಟುವಟಿಕೆಗಳ ಸುಳಿವು ಸಿಕ್ಕಲ್ಲಿ ಪೋಲಿಸರಿಗೆ ತಿಳಿಸಬೇಕು. ಭಾರತದ ಸರ್ಕಾರದ ಅಧಿಕೃತ ಪತ್ರಿಕಾ ಹೇಳಿಕೆ ಗಳಷ್ಟೇ ನಂಬಬೇಕು. ವಿನಹ ಸಾಮಾಜಿಕ ಜಾಲತಾಣದಲ್ಲಿ, ಮಾಧ್ಯಮಗಳಲ್ಲಿ ಬರುವ ಸುದ್ದಿಗಳನ್ನು ನಂಬುವಲ್ಲಿ ಎಚ್ಚರಿಕೆವಹಿಸಬೇಕು. ಅವುಗಳನ್ನು ಪಾವರ್ಡ ಮಾಡುವಲ್ಲಿ ಎಚ್ಚರಿಕೆವಹಿಸಬೇಕು. ಸಿಂಧೂರ ಅಳಿಸಿದವರಿಗೆ ಆಪರೇಶನ್ ಸಿಂಧೂರ ಮೂಲಕ ದೇಶದ ಗೌರವ ರಕ್ಷಿಸಿದ ಸೇನೆಯನ್ನು ಬೆಂಬಲಿಸೋಣ. ಪಾಕಿಸ್ತಾನದೊಳಗೆ ನುಗ್ಗಿ ಪಾಠ ಕಲಿಸಿದ ಸೈನಿಕರ ಸೇವೆಯನ್ನು ಅವರ ಶೌರ್ಯವನ್ನು ನಮ್ಮ ಪ್ರತಿ ಮಾತುಕತೆಯಲ್ಲಿ ಪ್ರಶಂಸಿಸೋಣ. ಅಪ್ಪಟಭಾರತೀಯರಾಗಿ ಸಮಗ್ರ ಭಾರತೀಯಸೇನೆಗೆ ಒಂದು ಸಲಾಂ ಮಾಡೋಣ. ಜೈ ಹಿಂದ್.

**– ಮಹಾದೇವಯ್ಯ ಕರದಳ್ಳಿ**
ಗಿರಿಧಾಮ, ರಾಷ್ಟ್ರಕೂಟ ರಸ್ತೆ, ಓಂ ನಗರ, ವಿಶ್ವವಿದ್ಯಾಲಯ ಮಾರ್ಗ, ಕಲಬುರ್ಗಿ 585 105

# ಮಲ್ಲದಕಲ್ : ಇಂದು 25ನೇ ವರ್ಷ ದ ಮೋತಿಸಅಲಿ ಶರಣರ ಉರುಸ್/ ದರ್ಪದ ದೊರೆ ನಾಟಕ ಪ್ರದರ್ಶನ



ಜನವಾದಿ ವಾರ್ತೆ

ದೇವದುರ್ಗ ಮೇ 7– ತಾಲೂಕಿನ ಮಲದಕಲ್ ಗ್ರಾಮದ ಐತಿಹಾಸಿಕ ಪ್ರಸಿದ್ಧ ಹಜರತ್ ಮೋತಿಸಅಲಿ ಶರಣರ 25ನೇ ವರ್ಷದ ಉರುಸ್ ಮೇ 08ರಂದು ಗುರುವಾರ ಜರುಗಲಿದ್ದು,ಗ್ರಾಮದ ಸರ್ವ ಧರ್ಮದವರು ಈ ಉರುಸ್‌ನಲ್ಲಿ ಪಾಲ್ಗೊಳ್ಳುವದು ವಿಶೇಷವಾಗಿದ್ದು, ಹಜರತ್ ಮೋತಿಸಅಲಿ ಶರಣರು ಭಕ್ತರ ಬೇಡಿಕೆಯನ್ನು ಈಡೇರಿಸುವ ಕಾಮಧೇನುವಾಗಿದ್ದಾರೆ. ಪ್ರತಿವರ್ಷ ವಿಜೃಂಭಣೆಯಿಂದ ಜರುಗುವ ಉರುಸ್ ಸಮನ್ವಯತೆಯಿಂದ, ಸೌಹಾರ್ದತೆಯಿಂದ ಗ್ರಾಮದ ಎಲ್ಲ ಜನಾಂಗದವರು ಪಾಲ್ಗೊಳ್ಳುವುದು, ತಮ್ಮ ಇಷ್ಟಾರ್ಥಗಳನ್ನು ಹರಕೆ ಮಾಡಿಕೊಳ್ಳವುದು ಸಾಮಾನ್ಯ ಸಂಗತಿ. ಆದರೆ ಪ್ರತಿಯೊಬ್ಬರು ಸ್ವಚ್ಛ ಮನಸ್ಸಿಂದ ನಂಬಿಕೆಯಿಟ್ಟು ಬೇಡಿಕೊಂಡವರ ಕೋರಿಕೆಗಳು ಈಡೇರುತ್ತಿರುವದರಿಂದಲೇ ಭಕ್ತರ ಸಂಖ್ಯೆ ದ್ವಿಗುಣಗೊಳ್ಳುತ್ತಿದೆ. ಉರುಸ್ ಕಾರ್ಯಕ್ರಮಗಳು ನೆರೆದ ಭಕ್ತರಲ್ಲಿ ಭಕ್ತಿ–ಭಾವ ಮೂಡಿಸುವುದರೊಂದಿಗೆ ಐಕ್ಯತಾ ಮನೋಭಾವ ಬೆಳೆಸುತ್ತವೆ. ಹಾಗಾಗಿ ಸುತ್ತ–ಮುತ್ತಲಿನ ಭಕ್ತರು ಈ ಉರುಸ್ ಕಾರ್ಯಕ್ರಮದಲ್ಲಿ ಭಾಗವಹಿಸಬೇಕು. ಮತ್ತು ಮೋತಿಸ ಅಲಿ ಶರಣರ ಉರುಸ್ ಅಂಗವಾಗಿ ಶ್ರೀ ಗುರು ಆಡೇಶ್ವರ ಯುವ ನಾಟಕ ಸಂಘ ಮಲದಕಲ್ ಇವರಿಂದ ಗುರುವಾರ ರಾತ್ರಿ ದರ್ಪದ ದೊರೆ ಎಂಬ ಸುಂದರ ಸಾಮಾಜಿಕ ನಾಟಕ ಪ್ರದರ್ಶನ ಇರುವುದು ಎಂದು ದರ್ಗಾ ಕಮಿಟಿ ಪ್ರಕಟಣೆಯಲ್ಲಿ ತಿಳಿಸಿದೆ.

# 'ಆಪರೇಷನ್ ಸಿಂಧೂರ್' ಕುರಿತು ರಾಷ್ಟ್ರಗಳಿಗೆ ಮಾಹಿತಿ ನೀಡಿದ ಭಾರತ

ನವದೆಹಲಿ ಮೇ 7– ಕೇಂದ್ರ ಸರ್ಕಾರ ಇಂದು ಮುಂಜಾನೆ ಯು–ಎಸ್, ರಷ್ಯಾ, ಯುಕೆ ಮತ್ತು ಸೌದಿ ಅರೇಬಿಯಾ ಸೇರಿದಂತೆ ಹಲವಾರು ಪ್ರಮುಖ ದೇಶಗಳನ್ನು ಸಂಪರ್ಕಿಸಿ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ–ಕಾಶ್ಮೀರದ ಒಂಬತ್ತು ಭಯೋತ್ಪಾದಕ ನೆಲೆಗಳ ಮೇಲೆ ನಡೆಸಿದ ಮಿಲಿಟರಿ ದಾಳಿಯ ಬಗ್ಗೆ ವಿವರಿಸಿದೆ ಎಂದು ಮೂಲಗಳು ತಿಳಿಸಿವೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಈ ದಾಳಿಗಳನ್ನು ನಡೆಸಲಾಯಿತು. ಭಾರತ ಕೈಗೊಂಡ ಕ್ರಮಗಳ ಬಗ್ಗೆ ವಿವರಿಸಲು ಹಿರಿಯ ಭಾರತೀಯ ಅಧಿಕಾರಿಗಳು ಹಲವಾರು ದೇಶಗಳಲ್ಲಿನ ತಮ್ಮ ಸಹವರ್ತಿಗಳೊಂದಿಗೆ ಮಾತನಾಡಿದ್ದಾರೆ ಎಂದು ಮೂಲಗಳು ತಿಳಿಸಿವೆ. ಇವುಗಳಲ್ಲಿ ಅಮೆರಿಕ, ಬ್ರಿಟನ್, ಸೌದಿ ಅರೇಬಿಯಾ, ಯುನೈಟೆಡ್ ಅರಬ್ ಎಮಿರೇಟ್ಸ್ ಮತ್ತು ರಷ್ಯಾ ಸೇರಿವೆ.ಭಾರತ ಮತ್ತು ವಿದೇಶಗಳಲ್ಲಿ ವ್ಯಾಪಕ ಆಕ್ರೋಶಕ್ಕೆ ಕಾರಣವಾದ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಎರಡು ವಾರಗಳ ನಂತರ ಭಾರತ ಈ ಕ್ರಮ ಕೈಗೊಂಡಿದೆ.

25 ಭಾರತೀಯರು ಮತ್ತು ಒಬ್ಬ ನೇಪಾಳಿ ಪ್ರಜೆಯನ್ನು ಹತ್ಯೆ ಮಾಡಿದ ಅನಾಗರಿಕ ಪಹಲ್ಗಾಮ್ ಭಯೋತ್ಪಾದಕ ದಾಳಿಯ ಹಿನ್ನೆಲೆಯಲ್ಲಿ ಈ ಕ್ರಮಗಳು ಬಂದಿವೆ ಎಂದು




ರಕ್ಷಣಾ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ.ಈ ದಾಳಿಗೆ ಕಾರಣ–ರಾದವರನ್ನು ಹೊಣೆಗಾರರನ್ನಾಗಿ ಮಾಡಲಾಗುವುದು ಎಂಬ ಬದ್ಧತೆಗೆ ನಾವು ಬದ್ಧರಾಗಿದ್ದೇವೆ ಎಂದು ಅದು ಹೇಳಿದೆ.

ಹಲವು ದೇಶಗಳೊಂದಿಗೆ ಮಾಹಿತಿ ವಿನಿಮಯ ಭಾರತವು ಇಂದು ನಸುಕಿನ ಜಾವವೇ ಅಮೆರಿಕ, ರಷ್ಯಾ, ಯುಕೆ ಮತ್ತು ಸೌದಿ ಅರೇಬಿಯಾ ಸೇರಿದಂತೆ ಹಲವು ಪ್ರಮುಖ ದೇಶಗಳನ್ನು ಸಂಪರ್ಕಿಸಿ ಪಾಕಿಸ್ತಾನ ಮತ್ತು ಪಾಕ್ ಆಕ್ರಮಿತ ಕಾಶ್ಮೀರದಲ್ಲಿನ ಒಂಬತ್ತು ಭಯೋತ್ಪಾದಕ ಸ್ಥಳಗಳ ಮೇಲೆ ನಡೆಸಿದ ಸೇನೆಯ ಆಪರೇಷನ್ ಸಿಂಧೂರ ಕಾರ್ಯಾಚರಣೆ ಕುರಿತಂತೆ ವಿವರಿಸಿದೆ ಎಂದು ಮೂಲಗಳು ತಿಳಿಸಿವೆ.

ಪಹಲ್ಗಾಮ್ ಭಯೋತ್ಪಾದಕ ದಾಳಿಗೆ ಪ್ರತೀಕಾರವಾಗಿ ಈ ದಾಳಿಗಳನ್ನು ನಡೆಸಲಾಗಿದೆ. ಭಾರತ ತೆಗೆದುಕೊಂಡ ಕ್ರಮಗಳ ಬಗ್ಗೆ ವಿವರಿಸಲು ಹಿರಿಯ ಭಾರತೀಯ ಅಧಿಕಾರಿಗಳು ಹಲವಾರು ದೇಶಗಳಲ್ಲಿನ ತಮ ಸಹವರ್ತಿಗಳೊಂದಿಗೆ ಮಾತನಾಡಿದ್ದಾರೆ.

# 'ಆಪರೇಷನ್ ಸಿಂಧೂರ್'ನಲ್ಲಿ ಆಧುನಿಕ ಶಸ್ತ್ರಾಸ್ತ್ರ ಮತ್ತು ಕ್ಷಿಪಣಿ ಬಳಕೆ

ನವದೆಹಲಿ ಮೇ 7– ಆಪರೇಷನ್ ಸಿಂಧೂರ್‌ನಲ್ಲಿ ಭಾರತವು ಅನೇಕ ಆಧ–ುನಿಕ ಶಸ್ತ್ರಾಸ್ತ್ರಗಳು ಮತ್ತು ಕ್ಷಿಪಣಿಗಳನ್ನು ಬಳಸಿದೆ. ಭಾರತೀಯ ಸೇನೆಯು ರಫೇಲ್ ಜೆಟ್‌ಗಳಲ್ಲಿ ಅಳವಡಿಸಲಾದ ಸ್ಕಾಲ್ಪ್ ಕ್ರೂಸ್ ಕ್ಷಿಪಣಿ, ಹ್ಯಾಮರ್ ಕ್ಷಿಪಣಿ ಹಾಗೂ ಆತ್ಮಾಹುತಿ ಡ್ರೋನ್‌ಗಳಂಥ ಅತ್ಯಾಧುನಿಕ ಶಸ್ತ್ರಾಸ್ತ್ರಗಳನ್ನು ಬಳಸಿರುವುದು ಬೆಳಕಿಗೆ ಬಂದಿದೆ.

ಆಪರೇಷನ್ ಸಿಂಧೂರ್‌ನಲ್ಲಿ ಭಾರತೀಯ ಸಶಸ್ತ್ರ ಪಡೆಗಳು ಸ್ಕಾಲ್ಪ್ ಕ್ರೂಸ್ ಕ್ಷಿಪಣಿಯನ್ನು ಬಳಸಿವೆ. ಇದನ್ನು ಯುರೋಪಿಯನ್ ರಕ್ಷಣಾ ಕಂಪನಿ ಎಂಬಿಡಿಎ ತಯಾರಿಸಿದೆ. ಇದು ಸುಮಾರು 1,300 ಕಿಲೋಗ್ರಾಂಗಳಷ್ಟು (2,870 ಪೌಂಡ್‌ಗಳು) ತೂಕವಿದ್ದು, ಗಟ್ಟಿಯಾದ ಬಂಕರ್‌ಗಳು ಮತ್ತು ನಿರ್ಣಾಯಕ ಮೂಲಸೌಕರ್ಯಗಳಂತಹ ಗುರಿಗಳನ್ನು ನಾಶಮಾಡುವ ದೃಷ್ಟಿಯಿಂದ ವಿನ್ಯಾಸಗೊಳಿಸಲಾಗಿದೆ. ಇದರ ವ್ಯಾಪ್ತಿಯು 250




ರಿಂದ 560 ಕಿಲೋಮೀಟರ್ ಆಗಿದೆ. ಇದರ ವೇಗ ಗಂಟೆಗೆ ಸುಮಾರು 1000 ಕಿಲೋಮೀಟರ್.

ಸ್ಕಾಲ್ಪ್ ಕ್ಷಿಪಣಿಯು ಜಿಪಿಎಸ್ ಸೇರಿ ಅತ್ಯಾಧುನಿಕ ನ್ಯಾವಿಗೇಷನ್ ವ್ಯವಸ್ಥೆಗಳನ್ನು ಬಳಸಿಕೊಂಡು ಸರಿಯಾದ ಹಾದಿಯಲ್ಲಿ ಚಲಿಸುವಂತೆ ಮಾಡುತ್ತದೆ. ಈ ಕ್ಷಿಪಣಿಯು ಬಾಂಬ್ ರಾಯಲ್ ಆರ್ಡನೆನ್ ಆಗೆಂಟೆಡ್ ಚಾರ್ಜ್‌ನೊಂದಿಗೆ ಸಜ್ಜುಗೊಂಡಿದ್ದು, ಇದು ಬಂಕರ್‌ಗಳು ಮತ್ತು ಬಲವಾದ ಗುರಿಗಳನ್ನು ಸಹ ಭೇದಿಸಬಲ್ಲದು. 2020 ರಲ್ಲಿ ಲಡಾಖ್‌ನಲ್ಲಿನ ಉದ್ವಿಗ್ನತೆಯ ಸಮಯದಲ್ಲಿ, ಚೀನಾದ ಟಿಬೆಟ್ ಪ್ರದೇಶದ ಗುರಿಗಳ ಮೇಲೆ ದಾಳಿ ಮಾಡಲು ಸ್ಕಾಲ್ಪ್ ಹೊಂದಿದ ರಫೇಲ್ ಜೆಟ್‌ಗಳನ್ನು ಅಂಬಾಲಾದಲ್ಲಿ ನಿಯೋಜಿಸಲಾಗಿತ್ತು.

ಆಪರೇಷನ್ ಸಿಂಧೂರ್ ಕಾರ್ಯಾಚರಣೆಗೆ ಹ್ಯಾಮರ್ ಕ್ಷಿಪಣಿಯನ್ನೂ (ಹೈಲಿ ಅಗೈಲ್ ಮಾಡ್ಯುಲರ್ ಮ್ಯುನಿಷನ್ ಎಕ್ಸ್ಟೆಂಡೆಡ್ ರೇಂಜ್) ಬಳಸಲಾಗಿತ್ತು. ಇದನ್ನು ಫ್ರಾನ್‌ನ ರಕ್ಷಣಾ ಕಂಪನಿ ಸಾಫ್ರಾನ್ ತಯಾರಿಸಿದೆ. ಇದು ಮಧ್ಯಮ ವ್ಯಾಪ್ತಿಯ ಕ್ಷಿಪಣಿಯಾಗಿದೆ. ಈ ಕ್ಷಿಪಣಿಯನ್ನು ಆಕಾಶದಿಂದ ನೆಲದ ಗುರಿಯತ್ತ ಹಾರಿಸಬಹುದಾಗಿದೆ. 2020 ರಲ್ಲಿ ಚೀನಾದೊಂದಿಗಿನ ಗಡಿ ಉದ್ವಿಗ್ನತೆಯ ಸಮಯದಲ್ಲಿ ಭಾರತವು ರಫೇಲ್ ಜೆಟ್‌ಗಳಿಗಾಗಿ ಈ ಶಸ್ತ್ರವನ್ನು ಖರೀದಿಸಿತ್ತು.

# ಎಪಿಎಂಸಿ ತಾಯಮ್ಮದೇವಿ ದೇವಸ್ಥಾನದ ಹುಂಡಿ ಕಳುವು; ಕಳ್ಳನ ಪತ್ತೆಗೆ ಮೀನಾ ಮೇಷ

ಜನವಾದಿ ವಾರ್ತೆ

ಸಿರವಾರ ಮೇ 06– ಪಟ್ಟಣದ 3 ನೇ ವಾರ್ಡ್ ನ ವ್ಯಾಪ್ತಿಯ ಎಪಿಎಂಸಿ ರಸ್ತೆಯಲ್ಲಿರುವ ಶ್ರೀ ತಾಯಮ್ಮ ದೇವಿ ದೇವಸ್ಥಾನದ ಹುಂಡಿ ಕಳುವಾಗಿದ್ದು, ಹುಂಡಿಂ–ಯಲ್ಲಿದ್ದ ಸುಮಾರು 40 ರಿಂದ 50 ಸಾವಿರ ರೂ.ಗಳನ್ನು ಕಳುವು ಮಾಡಲಾಗಿದೆ. ಕಳ್ಳನ ಪತ್ತೆಗೆ ಪೊಲೀಸ್ ಇಲಾಖೆ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ವಾರ್ಡ್ ನ ನಿವಾಸಿಗಳು ಆರೋಪಿಸಿದ್ದಾರೆ.

ಕಳುವಾದ ಬಗ್ಗೆ ಸ್ಥಳೀಯ ನಿವಾಸಿಗಳು ಏ28 ರಂದೇ ಪೊಲೀಸ ಠಾಣೆಗೆ ದೂರು ನೀಡಿದ್ದು, ಇಲ್ಲಿಯವರೆಗೂ ಕಳ್ಳನ ಪತ್ತೆಗೆ



ಯಾವುದೇ ಕ್ರಮ ಕೈಗೊಳ್ಳದಿರುವುದು ಹಲವಾರು ಅನುಮಾನಗಳಿಗೆ ಎಡೆಮಾಡಿದೆ.

ಕಳ್ಳನ ಚಹರೆಯು ಸ್ಪಷ್ಟವಾಗಿ ಖಾಸಗಿ ಸಿಸಿ ಕ್ಯಾಮರಾಗಳಲ್ಲಿ ಸೆರೆಯಾಗಿದ್ದು, ಅದನ್ನು ಪೆನ್ ಡ್ರೈವ್ ನಲ್ಲಿ ಹಾಕಿ ಪೊಲೀಸರಿಗೆ ಒದಗಿಸಿದ್ದರೂ ಕಳ್ಳನನ್ನು ಸೆರೆ ಹಿಡಿದಿಲ್ಲ ಎಂಬುದು ಆತಂಕದ ವಿಷಯ.

# ಜಾತಿ ಕಾಲಂನಲ್ಲಿ ಮಾದಿಗ ಎಂದು ಬರೆಯಿಸಿ: ಹನುಮಂತಪ್ಪ ಮನ್ನಾಪುರ



ಜನವಾದಿ ವಾರ್ತೆ

ದೇವದುರ್ಗ ಮೇ 6– ರಾಜ್ಯ ಸರ್ಕಾರ ಒಳಮೀಸಲಾತಿ ನೀಡುವ ದೃಷ್ಟಿಯಿಂದ ರಾಜ್ಯಾದ್ಯಂತ ಮೇ 5ರಿಂದ 17ರವರೆಗೆ ದಲಿತರ ಜಾತಿ ಗಣತಿಗೆ ಮುಂದಾಗಿದೆ. ರಾಜ್ಯದ ಮಾದಿಗ ಸಮಾಜದ ಮುಖಂಡರು ಜಾತಿ ಕಾಲಂನಲ್ಲಿ ಕಡ್ಡಾಯವಾಗಿ ಮಾದಿಗ ಎಂದು ಬರೆಯಿಸಬೇಕು ಎಂದು ಮಾದಿಗ ಮೀಸಲಾತಿ ಹೋರಾಟ ಸಮಿತಿ ಜಿಲ್ಲಾಧ್ಯಕ್ಷ ಹನುಮಂತಪ್ಪ ಮನ್ನಾಪುರ ಹೇಳಿದರು. ಪಟ್ಟಣದ ಪ್ರವಾಸಿ ಮಂದಿರದಲ್ಲಿ ಕರೆದಿದ್ದ ಸುದ್ದಿಗೋಷ್ಠಿ ಉದ್ದೇಶಿಸಿ ಮಂಗಳವಾರ ಮಾತನಾಡಿದರು. ಒಳಮೀಸಲಾತಿ ಜಾರಿಗೆ ದಲಿತರ ಜನಸಂಖ್ಯೆ ಗಣತಿ ಮಾಡಲು ಸರ್ಕಾರ ಮುಂದಾಗಿದೆ. ಸರ್ಕಾರಿ ನೌಕರರು ದಲಿತರ ಮನ 'ಮನೆ ಭೇಟಿ ನೀಡಿ ಸಮೀಕ್ಷೆ ನಡೆಸಲಿದ್ದಾರೆ. ಮಾದಿಗ ಸಮಾಜದ ಜನರು ಸಮೀಕ್ಷೆಯಲ್ಲಿ ಪಾಲ್ಗೊಂಡು ಜಾತಿಕಾಲಂ ನಂಬರ್ 61ರಲ್ಲಿ ಮಾದಿಗ ಎಂದು ಬರೆಸಬೇಕು. ಒಳಮೀಸಲಾತಿ ಜಾರಿಗೆ ಆಗ್ರಹಿಸಿ ದಲಿತ ಸಂಘಟನೆಗಳು ಹೋರಾಟ ಮಾಡಿದರೂ ಸರ್ಕಾರಗಳು ಸ್ಪಂದಿಸಿರಲಿಲ್ಲ. ಒಳಮೀಸಲು ಜಾರಿ ಮಾಡುವಂತೆ ಸುಪ್ರೀಂ ಕೋರ್ಟ್ ಆದೇಶ ನೀಡಿದ್ದರಿಂದ ಕೆಲವು ರಾಜ್ಯಗಳಲ್ಲಿ ಒಳಮೀಸಲಾತಿ ಜಾರಿಗೊಳಿಸಲಾಗಿದೆ. ಆದರೆ, ರಾಜ್ಯ ಸರ್ಕಾರ ವಿನಾಕಾರಣ ವಿಳಂಬ ಮಾಡುತ್ತಿದೆ. ಈಗ ಜಾತಿಸಮೀಕ್ಷೆಗೆ ಮುಂದಾಗಿದೆ. ಜಾತಿ ಸಮೀಕ್ಷೆಯನ್ನು ನಾವು ಸ್ವಾಗತ ಮಾಡುತ್ತೇವೆ. ಹೀಗಾಗಿ ಎಲ್ಲ ಮಾದಿಗ ಸಮಾಜದ ಮುಖಂಡರು ತಮ್ಮ ಜನರಿಗೆ ಜಾಗೃತಿ ಮೂಡಿಸಿ, ಗಣತಿಯಲ್ಲಿ ಒಂದೂಕುಟುಂಬ ಹೊರಗುಳಿಯದಂತೆ ಎಚ್ಚರಿಕೆ ವಹಿಸಬೇಕು. ಅಧಿಕಾರಿಗಳು ಕೂಡ ಸಮೀಕ್ಷೆ ಸಂದರ್ಭದಲ್ಲಿ ಎಲ್ಲರ ಮಾಹಿತಿ ಪಡೆಯಬೇಕು ಎಂದರು.

ಮುಖಂಡರಾದ ವಿಶ್ವನಾಥ ಬಲ್ಲಿದವ್, ಬಸವರಾಜ ಅಕ್ಕರಕಿ, ಯಲ್ಲಪ ಆಲ್ದರ್ತಿ, ರಂಗಪ್ಪ ಹೊನ್ನಕುಣಿ, ಅಬ್ರಾಹಂ ಕಮಲದಿನ್ನಿ, ಮೌನೇಶ ಚಪ್ಪಳಕಿ ಇತರರಿದ್ದರು.

# ನೀರಿನ ಸಮಸ್ಯೆಗೆ ಸ್ಪಂದಿಸಿದ ಪಿಡಿಒ

ಜನವಾದಿ ವಾರ್ತೆ

ಮುದಗಲ್ ಮೇ 6– ಪಟ್ಟಣ ಸಮೀಪದ ನಾಗಲಾಪೂರು ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಬರುವ ಉಳಿಮೇಶ್ವರ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವ ಹಿನ್ನಲೆ ಸ್ಥಳಕ್ಕೆ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಜ್ಯೋತಿಬಾಯಿ ಭೇಟಿ ನೀಡಿ ಪರಿಶೀಲನೆ ಮಾಡಿದರು.

ಉಳಿಮೇಶ್ವರ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಕುರಿತು ಸಾರ್ವಜನಿಕರು ನಾಗಲಾಪೂರು ಗ್ರಾಮ ಪಂಚಾಯತಿಗೆ ದೂರು ನೀಡಿದ ಕಾರಣ ಸೋಮುವಾರ



ಭೇಟಿ ನೀಡಿ ಪರಿಶೀಲನೆ ಮಾಡಿ ಮಂಗಳವಾರ ಬೋರವೇಲ್ ಕೊರೆಯುವ ವಾಹನ ಕಳಿಸಿದರು ಎರಡುವರೆ ಇಂಚು ನೀರು ಕೂಡ ಬಂದಿವೆ ಎಂದು ಗ್ರಾಮಸ್ಥ ಶಂಕರ ನಾಯಕ ಮಾಹಿತಿ ನೀಡಿದರು

ಈ ಸಂದರ್ಭದಲ್ಲಿ ಗ್ರಾಮ ಪಂಚಾಯತಿ ಅಧ್ಯಕ್ಷ ಮೇಘಪ್ಪ ರಾಠೋಡ, ಸಿದ್ದಪ್ಪ. ತಳವಾರ, ವಿರೇಶ, ಮಹಾದೇವಪ್ಪ ಭೋಗಾಪೂರು, ಶರಣಪ್ಪ. ಕೋರಿ, ಭೀಮಪ್ಪ. ಕೋರಿ, ಗ್ಯಾನಪ್ಪ. ಮುದಗಲ್, ಹನುಮಂತ. ಭೋವಿ ಸೇರಿದಂತೆ ಮುಂತಾದವರು ಇದ್ದರು.

# ಕ್ರೂರ ಹತ್ಯೆಗೆ ಪ್ರತಿಕ್ರಿಯೆಯೇ ಆಪರೇಷನ್ ಸಿಂಧೂರ್ : ಅಮಿತ್ ಶಾ

ನವದೆಹಲಿ ಮೇ 7– ಪಹಲ್ಲಾಮ್‌ನಲ್ಲಿ ಮುಗ್ಧ ಜನರ ಕ್ರೂರ ಹತ್ಯೆಗಳಿಗೆ ಭಾರತದ ಪ್ರತಿಕ್ರಿಯೆಯೇ ಆಪರೇಷನ್ ಸಿಂಧೂರ್ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ಬಹವಾಲ್ಪುರದ ಜೈಶ್–ಎ–ಮೊಹಮ್ಮದ್ ಭದ್ರಕೋಟೆ ಮತ್ತು ಮುರಿಡ್ಕೆಯಲ್ಲಿರುವ ಲಷ್ಕರ್ –ಎ–ತೈಬಾದ ನೆಲೆ ಸೇರಿದಂತೆ ಪಾಕಿಸ್ತಾನ ಮತ್ತು ಪಾಕಿಸ್ತಾನ ಆಕ್ರಮಿತ ಕಾಶ್ಮೀರದ ಒಂಬತ್ತು ಭಯೋತ್ಪಾದಕ ಗುರಿಗಳ ಮೇಲೆ ಭಾರತೀಯ ಸಶಸ್ತ್ರ ಪಡೆಗಳು ಕ್ಷಿಪಣಿ ದಾಳಿ ನಡೆಸಿದ ನಂತರ ಶಾ ಅವರ ಹೇಳಿಕೆ ಬಂದಿದೆ.

ಈ ಮುಷ್ಕರಕ್ಕೆ ಆಪರೇಷನ್ ಸಿಂಧೂರ್ ಎಂದು ಸಂಕೇತನಾಮ ನೀಡಲಾಯಿತು.ಭಾರತ ಮತ್ತು ಅದರ ಜನರ ಮೇಲಿನ ಯಾವುದೇ ದಾಳಿಗೆ ಸೂಕ್ತ ಉತ್ತರ ನೀಡಲು ಮೋದಿ ಸರ್ಕಾರ ನಿರ್ಧರಿಸಿದೆ ಮತ್ತು ಭಯೋತ್ಪಾದನೆಯನ್ನು ಅದರ ಬೇರುಗಳಿಂದ ನಿರ್ಮೂಲನೆ ಮಾಡಲು ಭಾರತ ದೃಢವಾಗಿ ಬದ್ಧವಾಗಿದೆ ಎಂದು ಗೃಹ ಸಚಿವರು ಹೇಳಿದರು.

ನಮ್ಮ ಸಶಸ್ತ್ರ ಪಡೆಗಳ ಬಗ್ಗೆ ಹೆಮ್ಮೆ ಇದೆ. ಪಹಲ್ಲಾಮ್‌ನಲ್ಲಿ ನಮ್ಮ ಮುಗ್ಧ ಸಹೋದರರ ಕ್ರೂರ ಹತ್ಯೆಗೆ ಭಾರತದ ಪ್ರತಿಕ್ರಿಯೆ ಎಂದು ಅವರು ಎಕ್ಸ್‌ನಲ್ಲಿ ಬರೆದಿದ್ದಾರೆ. ಜಮ್ಮು ಮತ್ತು ಕಾಶ್ಮೀರದ ಪಹಲ್ಲಾಮ್‌ನಲ್ಲಿ ಏಪ್ರಿಲ್ 22 ರಂದು ನಡೆದ ಭಯೋತ್ಪಾದಕ ದಾಳಿಗೆ ಪ್ರತಿಕ್ರಿಯೆಯಾಗಿ ಭಾರತೀಯ ಸೇನೆ ಈ ದಾಳಿ ನಡೆಸಿದೆ.

# ಸಾವನದುರ್ಗದಲ್ಲೊಂದು ಸೂರ್ಯೋದಯ

ಸಾವನದುರ್ಗ ಟ್ರೆಕ್ ಕೇವಲ ದೈಹಿಕ ಸವಾಲಲ್ಲ, ಅದು ಮನಸ್ಸನ್ನು ಸಹ ಬಲಪಡಿಸುತ್ತದೆ. ಪ್ರಕೃತಿಯ ಸೌಂದರ್ಯದೊಂದಿಗೆ ಇತಿಹಾಸದ ಸ್ಪರ್ಶವಿರುವ ಈ ಬೆಟ್ಟ ಸವಿನೆನಪಾಗಿ ಉಳಿದಿದೆ. ಹಿಂತಿರುಗುವ ಮಾರ್ಗದಲ್ಲಿ, ನಾನು ಯೋಚಿಸುತ್ತಿದ್ದೆ: ಜೀವನದಲ್ಲಿ ಕೆಲವು ಗುರಿಗಳು ಸಾವನದುರ್ಗದ ಏರಿನಂತೆ ಕಠಿಣವಾಗಿರುತ್ತವೆ. ಆದರೆ, ನಾವು ಹಿಂತಿರುಗದೆ ಮುನ್ನಡೆದರೆ, ಶಿಖರ ತಲುಪಿ, ಜೀವನದ ಒಂದು ಸವಿನೆನಪನ್ನು ಗಳಿಸಬಹುದು.

ಎಷ್ಟೋ ಬಾರಿ ನಾವು ನಮ್ಮ ಸುತ್ತಮುತ್ತಲಿನ ಸೌಂದರ್ಯವನ್ನು ನಾವು ಗಮನಿಸುವುದೇ ಇಲ್ಲ ಎಂಬ ಮಾತು ಎಲ್ಲರಿಗೂ ಒಂದಲ್ಲ ಒಂದು ನಿಟ್ಟಿನಲ್ಲಿ ಅನ್ವಯಿಸುತ್ತದೆ, ಅನುಭವಕ್ಕೆ ಬರುತ್ತದೆ. ಹಲವಾರು ಸಲ ನಮ್ಮ ಸುತ್ತಮುತ್ತಲಿನ ನಿಸರ್ಗದ ಸೌಂದರ್ಯದ ಬಗ್ಗೆ ನಮಗೆ ಅರಿವೇ ಇರುವುದಿಲ್ಲ. ದೂರದ ದೇಶ, ದೂರದ ಊರು, ದೂರದ ಪ್ರಕೃತಿ ಬಹು ಸುಂದರ ಅನ್ನಿಸುವುದು ಇದೆ. ಎಲ್ಲಿಯವರೋ ಬಂದು ನಮ್ಮ ಸುತ್ತಮುತ್ತಲ ಜಾಗದ ಬಗ್ಗೆ ಮಾತನಾಡಿದಾಗ, ಬರೆದಾಗ, ಅನುಭವವನ್ನು ವಿವರಿಸಿದಾಗ ಮಾತ್ರ – ಹೌದಲ್ಲ, ಓಹ್ ಇಂತಹ ಜಾಗ, ಇಷ್ಟೇ ಹತ್ತಿರದಲ್ಲೇ ಇತ್ತಲ್ಲ, ನಮಗೆ ಗೊತ್ತೇ ಇರಲಿಲ್ಲ ಅನ್ನುವ ಹಾಗೆ. ಬೆಂಗಳೂರಿನಿಂದ ಕೇವಲ 60 ಕಿಲೋಮೀಟರ್ ದೂರದಲ್ಲಿ, ಮಾಗಡಿಯ ಹಸಿರು ಕಣಿವೆಗಳ ನಡುವೆ, ಪ್ರಕೃತಿಯ ಅಪೂರ್ವ ಏಕ ಶಿಲಾ ಬೆಟ್ಟ ಸಾವನದುರ್ಗ. ಏಶಿಯಾದ ಅತಿ ದೊಡ್ಡ ಏಕಶಿಲಾ ಬೆಟ್ಟಗಳಲ್ಲಿ ಒಂದಾದ ಇದರ ವಿಶಾಲತೆ, ಕಡಿದಾದ ಇಳಿಜಾರು, ಸುತ್ತಮುತ್ತಲಿನ ಹಸಿರು, ಬೆಟ್ಟದ ಮೇಲಿಂದ ಕಾಣುವ ಸುತ್ತಮತ್ತಲ ದೃಶ್ಯ, ಎಂತವರನ್ನೂ ಆಕರ್ಷಿಸುತ್ತದೆ.

ಇದರ ಬಗ್ಗೆ ಕೇಳಿದ್ದು ತುಂಬಾ ಕಡಿಮೆ, ಓದಿದ್ದು ಮತ್ತೂ ಕಡಿಮೆ. ಆದರೆ ಒಂದು ಮುಂಜಾವ ಎದ್ದು ಬೆಳಗಿನ ಸೂರ್ಯೋದಯ ನೋಡಲು ಹೊರಡೋಣ ಅಂತ ಹೋದಾಗ ಕಣ್ಣಿಗೆ ಕಂಡ ಬೆಟ್ಟ ಬಹು ಚಂದದ ಏಕ ಶಿಲಾ ಬೆಟ್ಟ – ಸಾವನದುರ್ಗ. ದೂರದಿಂದ ಬಹು ಸುಲಭ ಎಂದು ಭಾಸವಾಗುವ ಸಾವನದುರ್ಗ ಚಾರಣ ಅತೀ ಸುಲಭದ ಚಾರಣವೇನಲ್ಲ. ಹಾಗೆಯೇ ತುಂಬಾ ಕಠಿಣವಾದ ಚಾರಣವೂ ಅಲ್ಲ. ಆರಂಭಿಕ ಚಾರಣಿಗರಿಗೆ ಈ ಚಾರಣ ಮಾಡುವುದು ಬಹು ಕಷ್ಟ. ಒಂದಿಷ್ಟು ಟ್ರೆಕಿಂಗ್ ತರಭೇತಿ, ಅನುಭವ ಇರುವ ಚಾರಣಿಗರು ಇದನ್ನು ಪ್ರಯತ್ನಿಸಬಹುದು. ಈ ಬೆಟ್ಟವನ್ನು ಸಾವಿನದುರ್ಗ ಅಂತಲೂ ಇದನ್ನು ಕರೆಯುತ್ತಾರೆ, ಇದಕ್ಕೆ ಮುಖ್ಯ ಕಾರಣ – ಹಲವಾರು ಚಾರಣಿಗರು ಈ ಬೆಟ್ಟದಲ್ಲಿ, ಚಾರಣ ಸಮಯದಲ್ಲಿ ದಾರಿ ತಪ್ಪಿ, ಬಂಡೆಯ ಕಡಿದಾದ ಹಾದಿಯಲ್ಲಿ ಸಿಲುಕಿ ವಿಧಿ ವಶವಾದ ಘಟನೆಗಳೂ ಇವೆ. ಹಾಗಾಗಿಯೇ ಈ ಚಾರಣಕ್ಕೆ ಕರ್ನಾಟಕ ಪರಿಸರ ಪ್ರವಾಸೋದ್ಯಮದಿಂದ ಪರವಾನಗಿ ಪಡೆಯಬೇಕಾಗುತ್ತೆ.

ಇಲ್ಲಿನ ಬೆಳಗಿನ ಸೂರ್ಯೋದಯ ಬಹು ಪ್ರಸಿದ್ಧಿ. ಮಾಗಡಿ ಸಮೀಪವಾಗುತ್ತಿದ್ದಂತೆ ಈ ಬೃಹದ್ದಾದ ಏಕಶಿಲೆ ದಾರಿಯುದ್ದಕ್ಕೂ ನಿಮ್ಮನ್ನು ಮೂಕವಿಸ್ಮಿತರನ್ನಾಗಿಸುವುದಲ್ಲಿ ಸಂಶಯವೇ ಇಲ್ಲ. ಸರಿ ಸುಮಾರು 1,226 ಮೀಟರ್ ಎತ್ತರ ಇದ್ದರೂ ಕೂಡ ಬಹಳ ಸಲೀಸಾಗಿ ಹತ್ತಿ ಇಳಿದು ಬರುವ ಬೆಟ್ಟವಲ್ಲ. ಮಧ್ಯಮ ಗತಿಯ ನಡಿಗೆಗೆ ಒಂದು 5–6 ಗಂಟೆ ಸಮಯ ಬೇಕಾಗುವ ಚಾರಣವಿದು. ದೇವಾಲಯದಿಂದ ತಳಭಾಗದಿಂದ ಶಿಖರವನ್ನು ತಲುಪಲು ಮತ್ತು ಶಿಖರದಲ್ಲಿ ಸಮಯ ಕಳೆಯಲು ಮತ್ತು ವಿಶ್ರಾಂತಿ ವಿರಾಮಗಳನ್ನು ನೀವು ಲೆಕ್ಕಹಾಕಿದರೆ, ಒಟ್ಟು ಚಾರಣವು ಪೂರ್ಣಗೊಳ್ಳಲು 6–7 ಗಂಟೆ ತೆಗೆದುಕೊಳ್ಳುತ್ತದೆ. ಹಾಗೆಯೇ ಒಳ್ಳೆಯ grip, ankle support ಇರುವಂತಹ ಶೂ ಅತೀ



ಅಗತ್ಯ. ಇನ್ನೂ ಅತೀ ಅಗತ್ಯವೆಂದರೆ – ಮಾನಸಿಕ ಸ್ಥೈರ್ಯ ಮತ್ತು sure footedness . ತುಂಬಾ ಕಡೆ ಕಡಿದಾದ ಇಳಿಜಾರು, ಲಂಬವಾದ ಏರು ಜಾಗವಿರುವುದರಿಂದ ಇದು ತುಂಬಾ ಅವಶ್ಯ. ಹಾಗೆಯೇ ಮಧ್ಯೆ ಎಲ್ಲಿಯೂ ಏನೂ ಸಿಗದ ಕಾರಣ ನೀರು, ಎನರ್ಜಿ ಬಾರ್ ತೆಗೆದು ಕೊಂಡು ಹೋಗುವ ಅಗತ್ಯವೂ ಇದೆ.

ಕರ್ನಾಟಕದ ರಾಜ್ಯ ಅರಣ್ಯವಾಗಿರುವ ಸಾವನದುರ್ಗ ಅರಣ್ಯದ ನಡುವೆ ಸಾವನದುರ್ಗ ಬೆಟ್ಟವಿದೆ. ಈ ಬೆಟ್ಟವು ಕರಿಗುಡ್ಡ (Black Hill) ಮತ್ತು ಬಿಳಿಗುಡ್ಡ(white Hill) ಸೇರಿದಂತೆ ದೊಡ್ಡ ಬೆಟ್ಟಗಳ ಒಂದು ಭಾಗವಾಗಿದೆ. ಆದರೂ ಕೂಡ ಇದರ ವಿಶಾಲತೆ, ಸೌಂದರ್ಯ ಹಾಗೂ ಸುತ್ತಮುತ್ತಲ ಪ್ರಕೃತಿ ನೋಟದಿಂದಾಗಿ, ಈ ಬೆಟ್ಟ ಇತರ ಬೆಟ್ಟಗಳಿಗಿಂತ ಜಾಸ್ತಿ ಪ್ರಸಿದ್ಧಿಯಾಗಿದೆ, ಹಾಗೂ ಚಾರಣಿಗರ ಬಹು ನೆಚ್ಚಿನ ತಾಣವೂ ಹೌದು. ಚಾರಣದ ಆರಂಭದಲ್ಲಿ, ಬೆಟ್ಟದ ಪಾದದಲ್ಲಿ ಸಾವಂದಿ ವೀರಭದ್ರಸ್ವಾಮಿ ಮತ್ತು ಶ್ರೀ ಲಕ್ಷ್ಮಿ ನರಸಿಂಹಸ್ವಾಮಿ ದೇವಾಲಯಗಳಿವೆ. ಬಹಳ ಪುರಾತನ ಕಾಲದ ದೇವಸ್ಥಾನಗಳಿವು. ಹೊಯ್ಸಳರ ಕಾಲದ್ದು ಎಂದು ಪ್ರತೀತಿ. ಇದನ್ನು ದಾಟಿ ನಡೆದು ಕೊಂಡು ಹೋದರೆ ಚಾರಣದ ಹಾದಿ ಹಿಡಿಯುತ್ತೀರಿ (ಈ ಹಾದಿ ಬಿಳಿಗುಡ್ಡದ ಮೇಲೆ ಹಾದು ಹೋಗುವ ಹಾದಿ). ಎಲ್ಲ ಕಡೆಯೂ ಕೂಡ ಹೋಗಬೇಕಾದ ದಾರಿಯನ್ನು ಗುರುತಿಸಲಾಗಿದೆ, ಇದೇ ಹಾದಿಯನ್ನು ಹಿಡಿದು ನಡೆಯಬೇಕು. ಹಾಗೆಯೇ, ಎಲ್ಲಿಯೂ ಕೂಡ ಈ ಗುರುತು ಹಾಕಿರುವ ದಾರಿಯನ್ನು ಬಿಟ್ಟು ಬೇರೆ ದಾರಿ ಹಿಡಿಯಬಾರದು, ಅದು ಅಪಾಯಕಾರಿ, ಆಗಿರುವ ಹಲವಾರು ಆಕಸ್ಮಿಕ ಘಟನೆಗಳು ಈ ತಪ್ಪಿನಿಂದಾಗಿ ನಡೆದಿವೆ. ಆದುದರಿಂದ ಇದರ ಬಗ್ಗೆ ತುಂಬಾ ಎಚ್ಚರ ಅಗತ್ಯ. ದೇವಸ್ಥಾನದಿಂದ ಬೆಟ್ಟದ ಚಾರಣ ಆರಂಭ ಪಾಯಿಂಟಿಗೆ ತಲುಪಲು ಸರಿ ಸುಮಾರು 20–30 ನಿಮಿಷ ತಗಲುವುದು. ಅದರ ಬಳಿಕ, ನಿಜವಾದ ಬಂಡೆ ಕಲ್ಲಿನ ಮೇಲಿನ ಚಾರಣ ಆರಂಭ. ಇಲ್ಲಿಂದ ನೆರಳಿನ ಜಾಗ ಬಹು ವಿರಳ. ಹಾಗೆಯೇ, ಕೆಲವೊಂದು ಆಯಕಟ್ಟಿನ ಇಳಿಜಾರನ್ನು ಬಹಳ ಜಾಗರೂಕತೆಯಿಂದ ನಡೆಯಬೇಕು. ಇಲ್ಲಿಂದ ಮೇಲೆ ನೋಡಿದರೆ, ಅಯ್ಯೋ ಅಷ್ಟು ದೂರ ಹೋಗುವುದು ಹೇಗೆ ಎನ್ನುವ ಸಂಶಯ ಬರದೇ ಇರದು.

ಮೊದಲ 20 ನಿಮಿಷದ ದಾರಿಯ ನಂತರದ ಭಾಗದಲ್ಲಿ ಬಂಡೆಗಳು ಜಾಸ್ತಿ ಏರುತ್ತಾ ಹೋಗುತ್ತವೆ. ಇಲ್ಲಿಂದ ಮುಂದೆ ಸಾಗಿದರೆ ಕೋಟೆಯ ಗೋಡೆಗಳು ಕಾಣಸಿಗುತ್ತವೆ. ಇದನ್ನು ಮೊದಲ ಕೋಟೆಯ ಗೋಡೆ ಎಂದು ಗುರುತಿಸಲಾಗುತ್ತದೆ. ಇಲ್ಲಿ ನಿಮಗೆ ಒಂದಿಷ್ಟು ನೆರಳಿನ ಜಾಗವಿದೆ. ಇಲ್ಲಿ ಒಂದಿಷ್ಟು ವಿಶ್ರಮಿಸಿ, ಸುತ್ತಮುತ್ತಲಿನ ದೃಶ್ಯವನ್ನು ಸವಿದು, ನಂತರ ಎರಡನೇ ಕೋಟೆಯ ಗೋಡೆಯ ಕಡೆ ನಡೆಯಬೇಕು, ಇದು ನೇರವಾಗಿ ಬೆಟ್ಟದ ಶಿಖರಕ್ಕೆ ತಲುಪಬಹುದಾದ ಹಾದಿ. ಈ ದಾರಿ ಅಷ್ಟೇನೂ ಸುಲಭದ ದಾರಿಯಲ್ಲ, ಇದು ಸಾದಾರಣ 2–3 ಗಂಟೆ ತೆಗೆದು ಕೊಳ್ಳಬಹುದು. ಇದನ್ನು ದಾಟಿ ಮುಂದೆ ನಡೆದರೆ ಬೆಟ್ಟದ ಶಿಖರದಲ್ಲಿರುವ ನಂದಿಯನ್ನು ಕಾಣಬಹುದು. ಶಿಖರ ತಲುಪುವ ಮುನ್ನ ಒಂದು 500 ಮೀಟರ್ ದೂರದಲ್ಲಿ ಕಡಿದಾದ ಆರೋಹಣವಿದೆ. ಅದನ್ನು ದಾಟಲು ಸುಮರು 25 –45 ನಿಮಿಷ ತೆಗೆದುಕೊಳ್ಳುತ್ತದೆ. ಚಾರಣದ ಈ ಭಾಗ ನಿಮ್ಮ ದೈಹಿಕ ಹಾಗೂ ಮಾನಸಿಕ ಫಿಟ್ನೆಸ್ ಅನ್ನು ಖಂಡಿತವಾಗಿ ಪರೀಕ್ಷಿಸುತ್ತದೆ. ಕೆಲವು ಪ್ರದೇಶಗಳಲ್ಲಿ ಕಲ್ಲಿನ ಮೆಟ್ಟಿಲುಗಳು ಸಹಾಯಕ್ಕೆ ಬರುತ್ತವೆ. ಆದರೆ ಇಲ್ಲಿ ನಿಧಾನವಾಗಿ ಪ್ರತೀ ಹೆಜ್ಜೆಯನ್ನೂ ಗಮನದಲ್ಲಿಟ್ಟು ಸಾಗಬೇಕಾಗುತ್ತದೆ. ಆದರೂ ಮುಂದೆ ಸಿಗುವ ದೃಶ್ಯವನ್ನು ಮನದಲ್ಲಿಟ್ಟುಕೊಂಡು ಸಾಗಿದರೆ ಬೆಟ್ಟ ಏರಿದ್ದೇ ತಿಳಿಯುವುದಿಲ್ಲ. ಒಂದು ಸ್ಥಳದಲ್ಲಿ, ಬಂಡೆಯ ಒಂದು ಭಾಗವು ಬಹು ಲಂಬವಾಗಿ ಇದೆ. ಈ ಜಾಗದಲ್ಲಿ ಎಂತವರಿಗೂ ಒಂದಿಷ್ಟು ಹೃದಯ ಬಡಿತ ವೇಗವಾಗುವುದು ಸಹಜ.

ಕೊನೆಯ ಹಂತದಲ್ಲಿ, ಬಂಡೆಗಳ ನಡುವೆ ಸಣ್ಣ ಗುಹೆಯಂತಹ ಮಾರ್ಗವಿದೆ. ಅದನ್ನು ದಾಟಿದ ನಂತರ–ಶಿಖರ! ಸುಮಾರು 2–3 ಗಂಟೆಗಳ ನಂತರ, ಶಿಖರದ ಕೊನೆಯನ್ನು ತಲುಪಿ ಅಲ್ಲಿನ ನಂದಿಯನ್ನು ವೀಕ್ಷಿಸಬಹುದು. ಅಲ್ಲಿಂದ ಕಾಣುವ ವಿಶಾಲವಾದ ಆಕಾಶ, ಮತ್ತು ಕೆಳಗೆ ಹಸಿರು ಕಣಿವೆಗಳು, ಜಲಾಶಯ, ಮತ್ತು ದೂರದ ಗ್ರಾಮಗಳ ದೃಶ್ಯ ನಿಮ್ಮ ಕಾಲುಗಳ ದಣಿವನ್ನು ಮರೆಯಾಗಿಸುತ್ತವೆ. ಇಲ್ಲಿಂದ ಕಾಣಸಿಗುವ ಸೂರ್ಯೋದಯ ಬಹು ಅಮೋಘ. ಬೆಟ್ಟದ ಮೇಲಿಂದ ಕಾಣುವ ಮಂಚಿನಬೆಲೆ ಜಲಾಶಯದ ನೋಟ ಕೂಡ ಬಹು ಸುಂದರ. ನೀವು ಅದೃಷ್ಟಶಾಲಿಯಾಗಿದ್ದರೆ, ಒಂದೊಮ್ಮೆ ಇಡೀ ಬೆಟ್ಟವನ್ನೇ ಮೋಡಗಳು ಆವರಿಸಿದಂತೆ, ನೀವು ಮೋಡಗಳ ಕಡಲಿನಲ್ಲಿ ತೇಲುವಂತೆ ಭಾಸವಾದರೆ ಆಶ್ಚರ್ಯವೇನಿಲ್ಲ. ಇಂತಹ ದೃಶ್ಯ ಪ್ರತೀ ಬಾರಿಯೂ ಲಭ್ಯವಿಲ್ಲ. ಒಂದಿಷ್ಟು ಮೋಡ ಕವಿದು, ಸೂರ್ಯ ಮೇಲೆ ಬಂದ ಮೇಲೆ, ಸುತ್ತಲೂ ಪಕ್ಷಿಗಳ ಕಲರವ ಮತ್ತು ಗಾಳಿಯ ಶಬ್ದ ಮಾತ್ರ ಕೇಳಿಸುತ್ತದೆ. ಹಾಗೆಯೇ, ಇಲ್ಲಿನ ಶಿಖರದ ಮೇಲಿನ ಸೂರ್ಯೋದಯ ಸವಿಯಬೇಕಾದರೆ, ಬೆಳಗಾತ 4–4.30 ಗೆ ಚಾರಣ ಶುರು ಮಾಡಬೇಕಾಗುತ್ತದೆ. ಹೆಡ್ ಲ್ಯಾಂಪ್, ಟಾರ್ಚ್ ಬಹು ಅವಶ್ಯ. ಹಾಗೆಯೇ ಉಕಖ ಮ್ಯಾಪ್ ಇದ್ದರೆ ಒಳ್ಳೆಯದು, ಇಲ್ಲವಾದರೆ, ಗುರುತು ಹಾಕಿದ ದಾರಿಯಲ್ಲಿಯೇ ನಡೆಯಬೇಕು. ಒಕ್ಟೋಬರ್‌ನಿಂದ ಈ ಚಾರಣವನ್ನು ಮಾಡಲು ಸೂಕ್ತ ಸಮಯ ಅಕ್ಟೋಬರ್ ನಿಂದ ಫೆಬ್ರವರಿ ನಡುವೆ. ಮಳೆಗಾಲದಲ್ಲಿ, ಅಂದರೆ ಮಾನ್ಸೂನ್ ತಿಂಗಳಿನಲ್ಲಿ ನೀರಿನ ನಿರಂತರ ಹರಿವಿನ ಕಾರಣ ಬಂಡೆ ಜಾರುವುದು ಜಾಸ್ತಿ. ಈ ಸಮಯದಲ್ಲಿ ಚಾರಣ ಮಾಡುವುದು ಸೂಕ್ತವಲ್ಲ, ಮತ್ತು ಅಪಾಯಕಾರಿ ಕೂಡಾ. ಹಾಗೇನೇ ಬೇಸಿಗೆಯ ತಿಂಗಳುಗಳಲ್ಲಿ, ತಾಪಮಾನವು ಹೆಚ್ಚಾಗಿ, ಬಂಡೆಯು ಬಿಸಿಯೇರುತ್ತದೆ. ಇದರಿಂದ ಕಡು ಬೇಸಿಗೆಯ ಕಾಲದಲ್ಲೂ ಕೂಡ ಚಾರಣ ಮಾಡುವುದು ತುಂಬಾ ಕಷ್ಟಕರ.

ನಾವು ಒಂದಿಷ್ಟು ವಿಶ್ರಮಿಸಿ, ತಂದಿದ್ದ ಚಹಾವನ್ನು, ತಿಂಡಿಯನ್ನು ತಿಂದು, ಫೋಟೋಗಳನ್ನು ತೆಗೆದುಕೊಂಡು, ಶಿಖರದಿಂದ ಇಳಿಯಲು ತಯಾರಾದೆವು. ಸಾವನದುರ್ಗ ಬೆಟ್ಟದಿಂದ ಕೆಳಕ್ಕೆ ಇಳಿಯುವುದು ಏರುವುದಕ್ಕಿಂತ ಕಷ್ಟಕರ ಎನ್ನಿಸುತ್ತದೆ, ಇದು ನಿಜವೂ ಹೌದು. ಇಳಿಯುವಾಗ ಜಾರಿಬೀಳುವ ಸಾಧ್ಯತೆಗಳು ಹೆಚ್ಚು ಆದ್ದರಿಂದ ಜಾಗರೂಕರಾಗಿರುವುದು ಮತ್ತು ನಿಧಾನವಾಗಿ ಹೆಜ್ಜೆ ಹಾಕುವುದು ಬಹಳ ಮುಖ್ಯ. ಕೆಲವು ಸ್ಥಳಗಳಲ್ಲಿ ನೀವು ಬಂಡೆಯ ಮೇಲೆ ಕುಕ್ಕರಿಸಿ ಜಾರಿಕೊಂಡೇ ಕೆಳಗೆ ಇಳಿಯಬೇಕಾಗುತ್ತದೆ. ಕೆಳಗೆ ಇಳಿದ ನಂತರ, ದೇವಾಲಯದ ಹತ್ತಿರ ನಾವು ತಂಪು ಪಾನೀಯಗಳನ್ನು ಕುಡಿದು, ಒಂದಿಷ್ಟು ಮುಳ್ಳುಸೌತೆಕಾಯಿ ತಿಂದು, ನಮ್ಮ ಬೆವರು ಮತ್ತು ಧೂಳಿನ ಮುಖ, ಆದರೆ ಉಲ್ಲಸಿತ ಹೃದಯದೊಂದಿಗೆ ಬೆಂಗಳೂರಿನತ್ತ ದಾರಿ ಹಿಡಿದೆವು.

ಸಾವನದುರ್ಗ ಟ್ರೆಕ್ ಕೇವಲ ದೈಹಿಕ ಸವಾಲಲ್ಲ, ಅದು ಮನಸ್ಸನ್ನು ಸಹ ಬಲಪಡಿಸುತ್ತದೆ. ಪ್ರಕೃತಿಯ ಸೌಂದರ್ಯದೊಂದಿಗೆ ಇತಿಹಾಸದ ಸ್ಪರ್ಶವಿರುವ ಈ ಬೆಟ್ಟ ಸವಿನೆನಪಾಗಿ ಉಳಿದಿದೆ. ಹಿಂತಿರುಗುವ ಮಾರ್ಗದಲ್ಲಿ, ನಾನು ಯೋಚಿಸುತ್ತಿದ್ದೆ: ಜೀವನದಲ್ಲಿ ಕೆಲವು ಗುರಿಗಳು ಸಾವನದುರ್ಗದ ಏರಿನಂತೆ ಕಠಿಣವಾಗಿರುತ್ತವೆ. ಆದರೆ, ನಾವು ಹಿಂತಿರುಗದೆ ಮುನ್ನಡೆದರೆ, ಶಿಖರ ತಲುಪಿ, ಜೀವನದ ಒಂದು ಸವಿನೆನಪನ್ನು ಗಳಿಸಬಹುದು. ಇದೆ ಕಾರಣಕ್ಕಾಗಿ ಸಾವನದುರ್ಗವನ್ನು ಮತ್ತೆ ವೀಕ್ಷಿಸಲು ಹಲವು ಬಾರಿ ಇಲ್ಲಿಗೆ ಹೋಗಿದ್ದು ಇದೆ, ಅಷ್ಟು ಸುಂದರವಾದ ಜಾಗವಿದು.

ಸಾವನದುರ್ಗ ಒಂದು ಸಣ್ಣ ಟ್ರೆಕಿಂಗ್ ಅನುಭವವಾದರೂ ಈ ಟ್ರೆಕ್ಕಿಂಗ್ ಪ್ರಯಾಣವು ನನ್ನ ಜೀವನದ ಅತ್ಯುತ್ತಮ ಅನುಭವಗಳಲ್ಲಿ ಒಂದಾಗಿದೆ. ಇದು ನನಗೆ ಪ್ರಕೃತಿಯ ಮಹತ್ವ, ಮತ್ತು ಸ್ವಂತ ಸಾಮರ್ಥ್ಯಗಳ ಮೇಲೆ ನಂಬಿಕೆಯನ್ನು ಕಲಿಸಿತು ಎಂದರೆ ತಪ್ಪಿಲ್ಲ. ಹಾಗೆಯೇ, ಇತರ ಬಹು ಕಠಿಣ ಟ್ರೆಕಿಂಗ್ ಗಳಿಗೆ ಬೇಕಾದ ತರಬೇತಿ ಟ್ರೆಕಿಂಗ್ ಅಂತ ಇದನ್ನು ಹಲವಾರು ಬಾರಿ ಚಾರಣ ಮಾಡಿದ್ದು ಇದೆ. ಆದುದರಿಂದಲೇ ಸಾವನದುರ್ಗದ ಮೇಲೆ ವಿಶೇಷ ನಂಟು. ಅಲ್ಲಿನ ಸೂರ್ಯೋದಯ ಬಲು ನೆಚ್ಚಿನ ಸೂರ್ಯೋದಯ ಕೂಡ.

– ಸುಚಿತ್ರಾ ಎಸ್ ಎ

# ಮೊದಲನೇ ಪುಟದಿಂದ

## ಶಾಸಕರು, ಉನ್ನತ ಮಟ್ಟದ ಅಧಿಕಾರಿಗಳು ಭಾಗಿ

ತರಬೇತಿ ನೀಡುವುದು, ಸಿವಿಲ್ ಡಿಫೆನ್ಸ್ ಕಂಟ್ರೋಲ್ ರೂಮ್‌ಗಳನ್ನು ಹಾಗೂ ಸಿವಿಲ್ ಡಿಫೆನ್ಸ್ ಸೈರನಗಳನ್ನು ಕಾರ್ಯಗತಗೊಳಿಸುವುದು ಮತ್ತು ಅಗತ್ಯ ಉಪಕರಣಗಳು ಮತ್ತು ಸರಬರಾಜಿನೊಂದಿಗೆ ನಾಗರಿಕ ರಕ್ಷಣಾ ಮತ್ತು ಸ್ಥಳೀಯ ತುರ್ತು ಸೇವೆಗಳನ್ನು ಸಜ್ಜುಗೊಳಿಸುವುದು, ವಸತಿಗಾಗಿ ಸುರಕ್ಷಿತ ಕಟ್ಟಡ ಮತ್ತು ಸೇನಾರಹಿತ ವಲಯವನ್ನು ಗುರುತಿಸುವುದು ಸೇರಿದಂತೆ ನಾನಾ ವಿಷಯಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಿತು.

ಮಾಕ್ ಡ್ರಿಲ್ ರೂಪುರೇಷಗಳ ಬಗ್ಗೆ ಸಹ ಸಭೆಯಲ್ಲಿ ಚರ್ಚೆ ನಡೆಯಿತು. ವಾಯುದಾಳಿಯ ಸಂದರ್ಭದಲ್ಲಿ ಸೈರನಗಳ ಸಕ್ರಿಯಗೊಳಿಸುವಿಕೆ, ತೆಗೆದುಕೊಳ್ಳಬೇಕಾದ ಕ್ರಮಗಳು, ಯಾವುದೇ ಕಟ್ಟಡದಲ್ಲಿ ಬೆಂಕಿಕಾಣಿಸಿಕೊಂಡಲ್ಲಿ ಪಾರಾಗುವ ಕ್ರಮಗಳು, ಹಾನಿಗೊಳಗಾದ ಕಟ್ಟಡದಿಂದ ಸ್ಥಳಾಂತರ ಕ್ರಮ, ತಾತ್ಕಾಲಿಕ ಆಸ್ಪತ್ರೆಯ ಸ್ಥಾಪನೆ, ಆಕ್ರಮಿತ ಪ್ರದೇಶದಿಂದ ನಾಗರಿಕನ್ನು ಸೇನಾರಹಿತ ವಲಯಗಳಿಗೆ ಸ್ಥಳಾಂತರಿಸುವುದು, ಕಂಟ್ರೋಲ್ ರೂಮ್‌ಗೆ ವರದಿ ನೀಡುವುದು ಸೇರಿದಂತೆ ನಾನಾ ವಿಷಯಗಳ ಬಗ್ಗೆ ಮಾಕ್ ಡ್ರಿಲ್ ಸಂದರ್ಭದಲ್ಲಿ ಸರಿಯಾಗಿ ಅಭ್ಯಾಸ ನಡೆಸಬೇಕು ಎಂದು ಸಭೆಯಲ್ಲಿ ನಿರ್ಣಯಿಸಲಾಯಿತು.

ಸಾರ್ವಜನಿಕರಲ್ಲಿ ಮನವಿ: ಈ ವೇಳೆ ರಾಯಚೂರ ಜಿಲ್ಲಾ ಉಸ್ತುವಾರಿ ಸಚಿವರಾದ ಡಾ.ಶರಣಪ್ರಕಾಶ ಪಾಟೀಲ ಅವರು ಮಾತನಾಡಿ, ತುರ್ತು ಪರಿಸ್ಥಿತಿಯ ಬಗ್ಗೆ ನಾಗರಿಕರು ಯಾವುದೇ ಆತಂಕಕ್ಕೆ ಒಳಗಾಗಬಾರದು ಎಂದು ಸಭೆಯ ಮೂಲಕ ಜಿಲ್ಲೆಯ ಜನರಲ್ಲಿ ಮನವಿ ಮಾಡಿದರು. ಆಯಾ ವಿಧಾನಸಭಾ ಕ್ಷೇತ್ರಗಳ ಎಲ್ಲ ಶಾಸಕರು ತಮ್ಮ ತಮ್ಮ ಕ್ಷೇತ್ರಗಳಲ್ಲಿದ್ದು ಈ ಬಗ್ಗೆ ವಿಶೇಷ ನಿಗಾವಹಿಸಬೇಕು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಅಧಿಕಾರಿಗಳು ಕೇಂದ್ರ ಸ್ಥಾನದಲ್ಲಿರಬೇಕು ಎಂದು ತಿಳಿಸಿದರು. ನಾಗರಿಕ ರಕ್ಷಣಾ ಕಾರ್ಯಚರಣೆಗೆ ಸಂಬಂಧಿಸಿದಂತೆ ಸರ್ವ ಪಕ್ಷಗಳ ಮತ್ತು ಎಲ್ಲ ಸಂಘಟನೆಗಳ ಸಭೆ ಕರೆದು ಚರ್ಚಿಸಲು ಕ್ರಮ ವಹಿಸಬೇಕು ಎಂದು ಸಚಿವರು ಎಲ್ಲ ತಹಸೀಲ್ದಾರಗಳಿಗೆ ಸೂಚನೆ ನೀಡಿದರು.

ರಾಯಚೂರಿನ ವೈಟಿಪಿಎಸ್, ಆರ್‌ಟಿಪಿಎಸ್‌ಗಳು, ರಸಾಯನಿಕ ಪ್ಯಾಕ್ಟ–ರಿಗಳನ್ನು ಗುರಿಯಾಗಿಸುವ ತಂತ್ರಗಾರಿಕೆಯ ಬಗ್ಗೆ ಮುನ್ನೆಚ್ಚರಿಕೆ ವಹಿಸಬೇಕು. ವಿಶೇಷವಾಗಿ ಭದ್ರತಾ ಪಡೆಗಳು ಮತ್ತು ಪೊಲೀಸ್ ಇಲಾಖೆಯ ಅಧಿಕಾ–ರಿಗಳು ತಾವಿರುವ ಸ್ಥಳದಲ್ಲಿ ಜಾಗೃತರಾಗಿರಬೇಕು. ಅವಶ್ಯಕ ಸಂದರ್ಭದಲ್ಲಿ ಸಹಾಯವಾಗಲು ಅಗ್ನಿಶಾಮಕ ವಾಹನಗಳ ಖರೀದಿಗೆ ಕ್ರಮ ವಹಿಸಬೇಕು. ತುರ್ತು ಪರಿಸ್ಥಿತಿಯ ಸಂದರ್ಭದಲ್ಲಿ ಆಸ್ಪತ್ರೆಯಲ್ಲಿ ಸುಸಜ್ಜಿತ ವೈದ್ಯಕೀಯ ಸೇವೆ ಇರುವಂತೆ ನೋಡಿಕೊಳ್ಳಬೇಕು ಎಂದು ಸಚಿವರು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮುಖ್ಯವಾಗಿ ವಿವಿಧ ಭದ್ರಾತಾ ಪಡೆಗಳು ಮತ್ತು ಪೊಲೀಸ್ ಇಲಾಖೆಯ ಅಧಿಕಾರಿಗಳು ಮತ್ತು ಸಿಬ್ಬಂದಿ ಸೂಕ್ತ ತರಬೇತಿಯೊಂದಿಗೆ ಕಾರ್ಯಾಚರಣೆಯಲ್ಲಿ ಸಕ್ರಿಯವಾಗಬೇಕು. ಆರೋಗ್ಯ, ಅಗ್ನಿಶಾಮಕ ಮತ್ತು ಇನ್ನೀತರ ಇಲಾಖೆಗಳೊಂದಿಗೆ ಸಮನ್ವಯದಿಂದ ಕಾರ್ಯ ನಡೆಸಿ ಸಾಕಷ್ಟು ಪೂರ್ವ ಸಿದ್ಧತೆ ಮಾಡಿಕೊಂಡಲ್ಲಿ ಯಾವುದೇ ಬಗೆಯ ತುರ್ತು ಪರಿಸ್ಥಿತಿಯ ಪ್ರತಿಕೂಲ ಸಂದರ್ಭವನ್ನು ಸಮರ್ಥವಾಗಿ ಎದುರಿಸಬಹುದಾಗಿದೆ ಎಂದು ಸಚಿವರಾದ ಎನ್.ಎಸ್.ಬೋಸರಾಜು ಅವರು ಮತ್ತು ಸಂಸದರಾದ ಜಿ.ಕುಮಾರ ನಾಯಕ ಅವರು ಅಧಿಕಾರಿಗಳಿಗೆ ಸಲಹೆ ಮಾಡಿದರು.

ಮಾಕ್‌ಡ್ರಿಲ್ ಮತ್ತು ಇನ್ನೀತರ ವಿಷಯಗಳ ಬಗ್ಗೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಪುಟ್ಟಮಾದಯ್ಯ ಅವರು ಸಭೆಗೆ ಮಾಹಿತಿ ನೀಡಿದರು.

ಸಭೆಯಲ್ಲಿ ಶಾಸಕರಾದ ಬಸನಗೌಡ ದದ್ದಲ್, ಬಸವರಾಜ ತುರವಿಹಾಳ, ಹಂಪನಗೌಡ ಬಾದರ್ಲಿ, ಎ ವಸಂತಕುಮಾರ, ಬಸನಗೌಡ ಬಾದರ್ಲಿ, ಜಿಲ್ಲಾಧಿಕಾರಿಗಳಾದ ನಿತೀಶ್ ಕೆ., ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರಾಹುಲ್ ತುಕಾರಾಂ ಪಾಂಡ್ವೆ, ಅಪರ ಜಿಲ್ಲಾಧಿಕಾರಿ ಶಿವಾನಂದ, ಸಹಾಯಕ ಆಯುಕ್ತರಾದ ಗಜಾನನ ಬಾಲೆ ಮತ್ತು ಇನ್ನೀತರರು ಇದ್ದರು.

## ಕುಡಿಯುವ ನೀರಿನ ಸಮಸ್ಯೆಯಾಗದಂತೆ ಎಚ್ಚರವಹಿಸಿ"

ವರದಿ ಸಲ್ಲಿಸಲು ಜಿಲ್ಲಾ ಮಟ್ಟದ ಅಧಿಕಾರಿ ಒಳಗೊಂಡ ಉನ್ನತ ಮಟ್ಟದ ತನಿಖಾ ಸಮಿತಿ ರಚಿಸಲು ತಾ.ಪಂ.ಸಾಮಾನ್ಯ ಸಭೆಯಲ್ಲಿ ನಿರ್ಧರಿಸಲಾಯಿತು.

ಸಭೆಯಲ್ಲಿ ಜಿ.ಪಂ.ಉಪವಿಭಾಗದಿಂದ ಈಗಾಗಲೇ ಮೂರು ಹಂತಗಳಲ್ಲಿ ನಡೆಸಲಾಗಿರುವ ಜೆಜೆಎಂ ವಿವಿಧ ಅಭಿವೃದ್ಧಿ ಕಾಮಗಾರಿಗಳಲ್ಲಿ ಕಳಪೆ ನಡೆದಿದೆ ಎಂದು ಕಳೆದ ಸಭೆಯಲ್ಲೇ ಹೇಳಿದ್ದೇನೆ. ಕೋಟ್ಯಾಂತರ ರೂ.ಗಳ ವೆಚ್ಚದಲ್ಲಿ ಕಾಮಗಾರಿಗಳು ನಡೆದಿವೆ. ಆದಾಗ್ಯೂ ಕಳಪೆ ಕಾಮಗಾ–ರಿಯ ವರದಿ ನೀಡಿಲ್ಲ. ಇದರ ಸಂಪೂರ್ಣ ತನಿಖೆಯಾಗಬೇಕು ಎಂದು ವಿಧಾನ ಪರಿಷತ್ ಶಾಸಕ ಬಸನಗೌಡ ಬಾದರ್ಲಿ ಆಗ್ರಹಿಸಿದರು. ಇದಕ್ಕೆ ಧ್ವನಿಗೂಡಿಸಿದ ಶಾಸಕ ಬಾದರ್ಲಿ ಜೆಜೆಎಂ ಅನುಷ್ಠಾನ ಸರಿಯಾಗಿಲ್ಲ. ಯಾವ ಗ್ರಾಮದಲ್ಲೂ ಜನರಿಗೆ ಸಮರ್ಪಕ ನೀರು ತಲುಪಿಸಲು ಆಗಿಲ್ಲ ಎಂದು ಅಸಮಧಾನ ವ್ಯಕ್ತಪಡಿಸಿದರು. ಜಿಲ್ಲಾ ಮಟ್ಟದ ಅಧಿಕಾರಿಯೊಬ್ಬರು ಒಳಗೊಂಡಿರುವ ತಾಂತ್ರಿಕ ಮುಖ್ಯಸ್ಥರು ಸೇರಿದ ತಂಡ ರಚಿಸಿ ತನಿಖೆಗೆ ನಡೆಸಿ ವರದಿ ನೀಡುವಂತೆ ಉಪಕಾರ್ಯದರ್ಶಿಗಳಿಗೆ ಬಸನಗೌಡ ಬಾದರ್ಲಿ ಸೂಚಿಸಿದರು.

ವಿವಿಧ ಇಲಾಖೆಗಳ ಪ್ರಗತಿ ಪರಿಶೀಲನೆ ಮಾಡಲಾಯಿತು. ಈ ಸಂದರ್ಭದಲ್ಲಿ ತಾ.ಪಂ. ಇಒ ಚಂದ್ರಶೇಖರ ಹಾಗೂ ವಿವಿಧ ಇಲಾಖೆಗಳ ತಾಲ್ಲೂಕು ಮಟ್ಟದ ಅಧಿಕಾರಿಗಳು, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಇದ್ದರು.

## ವಾಸವಿ ಜಯಂತಿ ಉತ್ಸವ ಅದ್ದೂರಿ ರಥೋತ್ಸವ

ರವೀಂದ್ರ ಜಲ್ದಾರ್, ಈ .ಶಶಿರಾಜ, ಜೆಡಿಎಸ್ ಜಿಲ್ಲಾಧ್ಯಕ್ಷರಾದ ಎಂ.ವಿರುಪಾಕ್ಷಿ ರವರು ಆಗಮಿಸಿ ವಾಸವಿ ಮಾತೆಯ ದರ್ಶನ ಪಡೆದು ಸಮಾಜದಿಂದ ಗೌರವ ಸನ್ಮಾನ ಸ್ವೀಕರಿದರು.

ಇದ್ದಕ್ಕೂ ಮುಂಚೆ ಬೆಳಿಗ್ಗೆ ದೇವಸ್ಥಾನದಲ್ಲಿ ಪಂಚಾಮೃತ ಅಭಿಷೇಕ, ವಾಸವಿ ಹೋಮ, ಸಾಮೂಹಿಕ ಕುಂಕುಮಾರ್ಚನೆ, ವಾಸವಿ ಖಡ್ಗ ಪಾರಾಯಣ , ಪಲ್ಲಕ್ಕಿ ಉತ್ಸವ , ಹಂಸ ವಾಹನ , ,ತೊಟ್ಟಿಲು ಸೇವೆ , ಸುವರ್ಣ ರಥೋತ್ಸವ ನಂತರ ಮಹಾ ಮಂಗಳಾರತಿ ನಡೆಯಿತು.

ಈ ಸಂದರ್ಭದಲ್ಲಿ ಆರ್ಯವೈಶ್ಯ ಸಮಾಜ ಶ್ರೀ ನಗರೇಶ್ವರ ದೇವಸ್ಥಾನ ಸಮಿತಿಯ ಅಧ್ಯಕ್ಷರಾದ ಸಾವಿತ್ರಿ ಪುರುಷೋತ್ತಮ, ಕಾರ್ಯದರ್ಶಿ ಚಿಗರಂಬಟ್ಲ ಪದ್ಮರಾಜ, ಕೋಶಾಧ್ಯಕ್ಷ ಜಟ್ರಂ ಶ್ರೀನಿವಾಸ, ಕಲ್ಯಾಣ ಮಂಟಪ ಕಟ್ಟಡ ಸಮಿತಿ ಅಧ್ಯಕ್ಷ ಕೆ.ಭೀಮಾಶಂಕರ,ಉಪಾಧ್ಯಕ್ಷರಾದ ಇಲ್ಲೂರು ಗೋಪಾಲಯ್ಯ, ಬಿ.ಜಗದೀಶ ಗುಪ್ತ, ಲೆಕ್ಕ ಪರಿಶೋಧಕರಾದ ನೆಲ್ಲೂರು ಶ್ರೀನಿವಾಸ, ವಿಶೇಷ ಸಲಹೆಗಾರರಾದ ಬಿ.ಗೋವಿಂದ, ಗಾಣಧಾಳ ಲಕ್ಷ್ಮೀಪತಿ, ಕಾನೂನು ಸಲಹೆಗಾರರಾದ ಕೆ.ಸಿ.ವೀರೇಶ ವಕೀಲರು, ಕಾರ್ಯಕಾರಿ ಮಂಡಳಿ ಸದಸ್ಯರಾದ ಮಂಚಾಲ ಕಿರಣ, ಜಟ್ರಂ ವೆಂಕಟೇಶ, ದೇವನಪಲ್ಲಿ ಯಂಕಣ್ಣ ಶೆಟ್ಟಿ, ಅಂಬಟಿ ವೆಂಕಟರಾಜ, ಚ್ಯಾಗಿ ವೆಂಕಟೇಶ, ಎಂ.ಆರ್. ಶ್ರೀನಿವಾಸ, ವಿಜ್ಞಾನ ವೆಂಕಟೇಶ, ಆಲೂರು ವೆಂಕಟೇಶ ವಕೀಲರು, ದೇವಗಾರಿ ಸತೀಶ, ಅಳ್ಳುಂಡಿ ವೀರಯ್ಯ ಶೆಟ್ಟಿ, ಕೆ.ಹೆಚ್. ವೀರೇಶ ಬಾಬು, ತೋರಣಾಳು ವೀಣಾ,ನಾಮ ಸದಸ್ಯರುಗಳಾದ ಜಟ್ರಂ ಗೋವಿಂದ ರಾಜ್ , ರಾಜಲಬಂಡಿ ನಾಗರಾಜ, ದೇವನಪಲ್ಲಿ ವಾಸುದೇವ,ಎಂ.ಬಿ.ಎನ್. ಆರ್. ಶ್ರೀನಿವಾಸ, ಪಾಲಟ್ಲಿ ಬಸವರಾಜ , ಚಿತ್ರಾಲ ರಮೇಶ, ಎಂ.ಆರ್. ದತ್ತಾತ್ರೇಯ, ಕೊಂಪಲ್ ಸ್ವಾತಿ ಸೇರಿದಂತೆ ನಗರದ ವಿವಿಧ ಸಂಘ ಸಂಸ್ಥೆಗಳ ಪದಾಧಿಕಾರಿಗಳು ಹಾಗು ಸುಮುದಾಯ ಜನರು, ಭಕ್ತರು, ಭಾಗವಹಿಸಿ ರಥೋತ್ಸವಕ್ಕೆ ಮೆರಗು ತಂದರು.ರಥೋತ್ಸವ ಸಂದರ್ಭದಲ್ಲಿ ಮಾರ್ಗದ ಮಧ್ಯೆ ಆರ್ಯವೈಶ್ಯ ಸಂಘ ಸಂಸ್ಥೆಗಳವರು ಮಜ್ಜಿಗೆ,ತಂಪು ಪಾನೀಯ,ಬಿಸ್ಕೆಟ್, ಐಸ್ಕ್ರೀಮ್ ಹಾಗೂ ಪ್ರಸಾದ ವಿತರಿಸಿದರು.

# ಉಟಕನೂರು ಗ್ರಾ.ಪಂ. ಪಿಡಿಓ ಶ್ವೇತಾ ಕುಲಕರ್ಣಿ ಅಮಾನತ್ತಿಗೆ ಎಸ್.ಎಂ.ಪಾಟೀಲ್ ಅಗ್ರಹ

ಜನವಾದಿ ವಾರ್ತೆ




ಮಾನ್ವಿ ಮೇ 7– ಮಾನ್ವಿ ತಾಲೂಕಿನ ಉಟಕನೂರು ಗ್ರಾಮ ಪಂಚಾಯತಯಲ್ಲಿ ಹಣ ದುರುಪಯೋಗ ಮಾಡಿ ಭಾರೀ ಅವ್ಯವಹಾರ ಮಾಡಿದ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ವೇತಾ ಕುಲಕರ್ಣಿ ಅವರ ಮೇಲೆ ಶಿಸ್ತುಕ್ರಮ ಕೈಗೊಂಡು ಆವ್ಯವಹಾರದ ಬಗ್ಗೆ ತನಿಖೆಗೂಳಪಡಿಸಿ ತಪ್ಪಿತಸ್ಥ ಪಿಡಿಓರವರನ್ನು ಕೂಡಲೇ ಸೇವೆಯಿಂದ ಅವಾನತ್ತುಗೊಳಿಸಬೇಕೆಂದು ಮುಖಂಡ ಎಸ್.ಎಂ. ಪಾಟೀಲ್ ಉದ್ಬಾಳ ಆಗ್ರಹಿಸಿದರು.

ಪಟ್ಟಣದ ಪತ್ರಿಕಾ ಭವನದಲ್ಲಿ ಕರೆದಿದ್ದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡುತ್ತಾ ಉಟಕನೂರು ಗ್ರಾಮ ಪಂಚಾಯತಿ ಅಭಿವೃದ್ಧಿ ಅಧಿಕಾರಿ ಶ್ವೇತಾ ಕುಲಕರ್ಣಿ ಅವರು ಕಳೆದ ಒಂದೂವರೆ ವರ್ಷದಿಂದ ಗ್ರಾಮ ಪಂಚಾಯತಿ ಅಧ್ಯಕ್ಷೆ ಈರಮ್ಮ ಅಮರಪ್ಪರವರ ವಿರುದ್ಧ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಅರೆ ನ್ಯಾಯಿಕ ನ್ಯಾಯಾಲಯದಲ್ಲಿ ಪ್ರಕರಣ ಇದ್ದು ಯಾವುದೇ ಚೆಕ್ ಗಳಿಗೆ ಸಹಿ ಮಾಡದಂತೆ ಹಾಗೂ ಹಣಕಾಸು ವ್ಯವಹಾರ ಮಾಡದಂತೆ ಮಧ್ಯಂತರ ಆದೇಶವನ್ನು ಹೊರಡಿಸಲಾಗಿದ್ದರೂ ಕೂಡಾ. ಪಂಚಾಯತಿಯ ಅಧ್ಯಕ್ಷರು, ಉಪಾಧ್ಯಕ್ಷರು ಹಾಗೂ ಸದಸ್ಯರ ಗಮನಕ್ಕೆ ತಾರದೆ ಬಾಪೂಜಿ ಆಕೌಂಟ್, ಎಸ್ಕ್ರೋ ಆಕೌಂಟ್ ಸೇರಿದಂತೆ ಇನ್ನಿತರ ಆಕೌಂಟ್ ಗಳ ಮೂಲಕ ನೆಟ್ ಬ್ಯಾಂಕಿಂಗ್ ಮೂಲಕ ಹಣ ವರ್ಗವಣೆ ಮಾಡಿ ಕೊಂಡಿದ್ದಾರೆ ಎಂದು ಎಸ್.ಎಂ.ಪಾಟೀಲ್ ಗಂಭೀರ ಆರೋಪ ಮಾಡಿದರು.

ಪಂಚಾಯತ ಅಭಿವೃದ್ಧಿ ಅಧಿಕಾರಿ ಶ್ವೇತಾ ಅವರಿಗೆ ಗ್ರಾಮ ಪಂಚಾಯತಿಯ ಹಲವು ಖಾತೆಗಳಲ್ಲಿನ ಅನುದಾನವನ್ನು ಅಭಿವೃದ್ಧಿ ಸಲುವಾಗಿ ಮಂಜೂರು ಮಾಡಲೆಂದು ಸದಸ್ಯರು ಕೇಳಿದರೆ ಅಧ್ಯಕ್ಷರು ಅಧಿಕಾರದಲ್ಲಿರುವುದಿಲ್ಲ ಹಣ ಎತ್ತುವಳಿ ಮಾಡಲು ಬರುವುದಿಲ್ಲವೆಂದು ಹೇಳಿ ಪಿಡಿಓರವರು ಒಬ್ಬಂಟಿಯಾಗಿ ಹಣ ಎತ್ತುವಳಿ ಮಾಡಿ ಸರ್ಕಾರದ ಕೋಟಿಗಟ್ಟಲೆ ಹಣ ದುರುಪಯೋಗ ಮಾಡಿ ಭಾರೀ ಅವ್ಯವಹಾರ ಮಾಡಿದ್ದಾರೆ ಎಂದು ದಾಖಲೆಗಳ ಸಮೇತ ಆರೋಪಿಸಿದರು.

ಈ ಕೂಡಲೇ ಪಂಚಾಯತಿಯಲ್ಲಿ ಅವ್ಯವಹಾರವನ್ನು ಮಾಡಿದ ಶ್ವೇತಾ ಕುಲಕರ್ಣಿ ಅವರ ವಿರುದ್ಧ ವಾರದೊಳಗೆ ಇಲಾಖೆ ತನಿಖೆ ಮಾಡಿಸಿ ತಪ್ಪಿತಸ್ಥ ಪಿಡಿಓ ಅವರನ್ನು ಕೂಡಲೇ ಸೇವೆಯಿಂದ ಅಮಾನತ್ತು ಮಾಡಬೇಕು. ಇಲ್ಲದಿದ್ದರೆ ಗ್ರಾ.ಪಂ.ಸದಸ್ಯರು, ಗ್ರಾಮಸ್ಥರಿಂದ ಪ್ರತಿಭಟನೆ ನಡೆಸಬೇಕಾಗುತ್ತದೆ ಎಂದು ಸಂಬಂಧಪಟ್ಟ ಜಿ.ಪಂ. ತಾ.ಪಂ. ಅಧಿಕಾರಿಗಳಿಗೆ ಎಸ್. ಎಂ.ಪಾಟೀಲ್ ಎಚ್ಚರಿಸಿದರು.

ಈ ಸಂದರ್ಭದಲ್ಲಿ ಮುಖಂಡರಾದ ಬಸವಲಿಂಗ ನೀಲಗಲ್, ಬಸವರಾಜ್ ಬಾಗಲವಾಡ, ರಂಜೀತ್ ಕೊಡ್ಲಿ, ಬಸವರಾಜ ಹೆಬ್ಬಾಳ್, ರಾಮಚಂದ್ರಪ್ಪ, ಪ್ರಕಾಶ್ ತಡಕಲ್, ಸೋಮಲಿಂಗಪ್ಪ, ಮಾಳಪ್ಪ ದೊತರಬಂಡಿ, ಶೇಖರಪ್ಪ ಖರಾಬದಿನ್ನಿ, ಸಾಬನಗೌಡ ಸೇ–ರಿದಂತೆ ಅನೇಕ ಮುಖಂಡರು, ಗ್ರಾ.ಪಂ.ಸದಸ್ಯರಿದ್ದರು.

# ರೆಡ್ಡಿರಾಯನಗೌಡ ಪರ ಕೋರ್ಟ್ ತೀರ್ಪು, ಪ್ರಕರಣ ವಜಾಗೊಳಿಸಿ ಕೋರ್ಟ್ ಆದೇಶ

ಜನವಾದಿ ವಾರ್ತೆ



ಲಿಂಗಸೂಗೂರು ಮೇ 07– ಲಿಂಗಸೂಗೂರು ಪುರಸಭೆ ಮುಖ್ಯಧಿಕಾರಿಯಾಗಿದ್ದ ರೆಡ್ಡಿ ರಾಯನಗೌಡ ಮಸ್ಕಿ ಪುರಸಭೆಯಲ್ಲಿ ಇದ್ದಾಗ ಪಿಠೋಪಕಾರಣ ಖರೀದಿಯಲ್ಲಿ ಹಣ ದುರ್ಬಳಕೆ ಮಾಡಿಕೊಂಡಿರುವುದು ಸಾಬೀತಾಗಿದೆ ಎಂದು ಜಿಲ್ಲಾಧಿಕಾರಿ ನಿತಿನ್ ಅವರು ಅಮಾನತ್ತು ಮಾಡಿ ಮಾರ್ಚ್ 24 ರಂದು ಆದೇಶ ಮಾಡಿದ್ದರು.

ಪ್ರಕರಣವು ಕಲಬುರ್ಗಿ ಉಚ್ಚ ನ್ಯಾಯಾಲಯದಲ್ಲಿ ವಿಚಾರಣೆಯಾಗಿ ರೆಡ್ಡಿ ರಾಯನಗೌಡ ಇವರ ಮೇಲೆ ಸುಳ್ಳು ಆರೋಪ ಮಾಡಲಾಗಿದ್ದು, ಯಾವುದೆ ಭ್ರಷ್ಟಾಚಾರ, ಹಣ ದುರ್ಬಳಕೆಯಲ್ಲಿ ಇವರು ಭಾಗಿಯಾಗಿರುವುದಿಲ್ಲ, ಅದಕ್ಕೆ ಪೂರಕವಾದ ಸೂಕ್ತ ಸಾಕ್ಷ್ಯದಾರಗಳು ಇಲ್ಲದಿರುವ ಕಾರಣ ಪ್ರಕರಣವನ್ನು ವಜಾಗೊಳಿಸಿ ಆದೇಶ ಮಾಡಿದೆ.

> ನನ್ನ ಮೇಲೆ ಸುಳ್ಳು ಆರೋಪ ಮಾಡಲಾಗಿದ್ದು, ಕೋರ್ಟ್ ನನ್ನ ಪರವಾಗಿ ಆದೇಶ ಮಾಡಿದೆ, ಮುಂದಿನ ವಾರದಲ್ಲಿ ಮತ್ತೆ ಮುಖ್ಯಧಿಕಾರಿಯಾಗಿ ಲಿಂಗಸೂಗೂರಿಗೆ ಬಂದು ಪಟ್ಟಣದ ಅಭಿವೃದ್ಧಿಗೆ ಶ್ರಮಿಸುವೆ.
>
> – ರೆಡ್ಡಿ ರಾಯನಗೌಡ

# ದಿಡ್ಡಿ ಬಸವೇಶ್ವರ ಜೋಡು ರಥೋತ್ಸವ ಸಂಪನ್ನ



ಜನವಾದಿ ವಾರ್ತೆ

ಸಿರವಾರ ಮೇ 07– ತಾಲೂಕಿನ ಅತ್ತನೂರು ಗ್ರಾಮದ ಆರಾಧ್ಯದೈವ ದಿಡ್ಡಿಬಸವೇಶ್ವರ ಜಾತ್ರ ಮಹೋತ್ಸವವು ಮಂಗಳವಾರ ವಿಜೃಂಭಣೆಯಿಂದ ಜರುಗಿತು.

ಬೆಳಗ್ಗೆ ಯಿಂದಲೇ ಬಸವೇಶ್ವರ ಮೂರ್ತಿಗೆ ವಿಶೇಷ ಪೂಜೆ, ಭಕ್ತ–ರಿಂದ ಹರಕೆ ಪೂರೈಕೆ, ಪೂಜಾ ಕೈಂಕರ್ಯಗಳು ಜರುಗಿದವು.

ಸಾಯಂಕಾಲ ಪಲ್ಲಕ್ಕಿ ಸೇವೆ ನಂತರ ಜೋಡು ರಥೋತ್ಸವವು ವಿಜೃಂಭಣೆಯಿಂದ ಜರುಗಿತು.

ನೀಲಗಲ್ ಬೃಹನ್ಮಠದ ಪೂಜ್ಯ ಶ್ರೀ ಡಾ.ಪಂಚಾಕ್ಷರಿ ಶಿವಾಚಾರ್ಯ ಸ್ವಾಮೀಜಿ, ಗಬ್ಬೂರಿನ ಪೂಜ್ಯ ಶ್ರೀ ಬೂದಿಬಸವ ಶಿವಾಚಾರ್ಯ ಸ್ವಾಮೀಜಿ, ರಾಯಚೂರು–ಅತ್ತನೂರು ಸೋಮವಾರ ಪೇಟೆ ಮಠದ ಪೂಜ್ಯ ಶ್ರೀ ರಾಚೋಟಿವೀರ ಶಿವಾಚಾರ್ಯ ಸ್ವಾಮೀಜಿ, ನವಲಕಲ್ಲು ಬೃಹನ್ಮಠದ ಪೂಜ್ಯ ಶ್ರೀ ಅಭಿನವ ಸೋಮನಾಥ ಶಿವಾಚಾರ್ಯ ಸ್ವಾಮೀಜಿ, ಮಾನ್ವಿ ಕಲ್ಮಠದ ಪೂಜ್ಯ ಶ್ರೀ ವಿರುಪಾಕ್ಷ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ, ಸುಲ್ತಾನಪುರದ ಪೂಜ್ಯ ಶ್ರೀ ಶಂಭುಸೋಮನಾಥ ಶಿವಾಚಾರ್ಯ ಸ್ವಾಮೀಜಿ, ಶ್ರೀ ಕ್ಷೀರಲಿಂಗ ಮಹಾಸ್ವಾಮಿಗಳು ಚೇಗುಂಟಾ, ಜಾಗಟಗಲ್ ಶರಣರು ಇತರರು ಇದ್ದರು.

ಸಚಿವರ ಭೇಟಿ : ಬೆಳಿಗ್ಗೆ ದೇವಸ್ಥಾನಕ್ಕೆ ಸಣ್ಣ ನೀರಾವರಿ, ವಿಜ್ಞಾನ ಹಾಗೂ ತಂತ್ರಜ್ಞಾನ ಸಚಿವರಾದ ಎನ್.ಎಸ್ ಭೋಸರಾಜ್ ಹಾಗೂ ಶಾಸಕರಾದ ಜಿ.ಹಂಪಯ್ಯ ನಾಯಕ ಭೇಟಿ ನೀಡಿ ಆಶೀರ್ವಾದ ಪಡೆದರು.

# ತುರ್ವಿಹಾಳದಲ್ಲಿ ಜನಪದ ಉತ್ಸವ

## ಜನಪದ ನೆಲದ ಸಂಸ್ಕೃತಿ – ಆರ್.ಬಸನಗೌಡ ತುರ್ವಿಹಾಳ

ಜನವಾದಿ ವಾರ್ತೆ



ಸಿಂಧನೂರು ಮೇ 06 – ಆಧುನಿಕತೆ ಗುಂಗಿನಲ್ಲಿ ಯುವ ಪೀಳಿಗೆ ನಮ್ಮ ಭವ್ಯ ಸಂಸ್ಕೃತಿಯಿಂದ ದೂರವಾಗುತ್ತಿದೆ. ಜನಪದ ಈ ನೆಲದ ಸಂಸ್ಕೃತಿಯಾಗಿದ್ದು, ಯುವ ಪೀಳಿಗೆಗೆ ಮುಟ್ಟಿಸುವ ಕೆಲಸವಾಗಬೇಕಿದೆ ಎಂದು ಮಸ್ಕಿ ಶಾಸಕ ಆರ್.ಬಸನಗೌಡ ತುರ್ವಿಹಾಳ ಹೇಳಿದರು.

ಪಟ್ಟಣದ ಸರಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಮಂಗಳವಾರ ಆಂತರಿಕ ಗುಣಮಟ್ಟ ಭರವಸಾ ಕೋಶ, ಸಾಂಸ್ಕೃತಿಕ ವಿಭಾಗ ಮತ್ತು ಎನ್.ಎಸ್.ಎಸ್ ವಿಭಾಗದಿಂದ ಹಮ್ಮಿಕೊಂಡಿದ್ದ ಜನಪದ ಸಂಸ್ಕೃತಿ–2025 ಡೊಳ್ಳು ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು. ಜಾನಪದ ಬದುಕು ರೂಪಿಸುವ ಸಂಸ್ಕೃತಿಯಾಗಿದೆ. ಗ್ರಾಮೀಣ ಜೀವನವೇ ಒಂದು ಅದ್ಭುತ ಸಂಸ್ಕೃತಿ. ಪ್ರತಿಯೊಂದು ಕೆಲಸ ಕಾರ್ಯದಲ್ಲೂ ಜನಪದ ಹಾಸು ಹೊಕ್ಕಾಗಿದೆ. ಜಾನಪದ ಉಳಿಸಿ–ಬೆಳೆಸುವ ಕೆಲಸವಾಗಬೇಕಿದೆ. ಕೇವಲ ಉತ್ಸವಕ್ಕಾಗಿ ಆಚರಣೆ ಬೇಡ. ಶಾಶ್ವತವಾಗಿ ಉಳಿಸುವ ನಿಟ್ಟಿನಲ್ಲಿ ಪ್ರಯತ್ನಗಳು ನಡೆಯಲಿ ಎಂದರು.

ಜನಪದ ಚಿಂತಕ ನಿರುಪಾದೆಪ್ಪ ಗುಡಿಹಾಳ ಮಾತನಾಡಿ, ಜನಪದ ತಾಯಿ ಬೇರು. ಜನಪದ ಸಂಸ್ಕೃತಿ ಕೊನೆಯಾದರೆ ಬದುಕೆ ಅನುವತಿ. ವಿಭಿನ್ನ ಭಾಷೆ, ಧರ್ಮ, ಜಾತಿಗಳ ವಿಶಿಷ್ಟ ಆಚರಣೆ, ಸಂಸ್ಕೃತಿ ಹೊಂದಿದ ವಿಶಿಷ್ಟ ದೇಶವಾಗಿದೆ. ಜಾನಪದ ಎಂದರೆ ಅದು ನಮ್ಮ ಗ್ರಾಮೀಣ ಜನರ ಬದುಕು, ಭವಿಷ್ಯವಾಗಿದೆ. ಜಾನಪದ ಕಲೆಗಳನ್ನು ಉಳಿಸಿ ಬೆಳೆಸುವ ಕೆಲಸವಾಗಬೇಕಿದೆ. ತಂತ್ರಜ್ಞಾನದ ಜೊತೆಗೆ ಜೀವನ ಅನಿವಾರ್ಯವಾಗಿದ್ದರೂ ದೇಶೀಯ ಸಂಸ್ಕೃತಿ ಮರೆಯಬಾರದು. ಗ್ರಾಮೀಣ ಕೃಷಿ ಜೀವನವೇ ಒಂದು ದೊಡ್ಡ ಜನಪದ ಸಂಸ್ಕೃತಿಯಾಗಿದೆ. ಜಾನಪದ ಗೀತೆ, ಗೀಗಿ ಪದಗಳು, ಲಾವಣಿ ಪದಗಳು, ಕೋಲಾಟ, ದೊಡ್ಡಾಟ, ದೇವರ ಗುಣಿತ, ವೀರಗಾಸೆ, ಪುರವಂತಿಕೆ ಗ್ರಾಮೀಣ ಜನಸಂಸ್ಕೃತಿಗೆ ಪ್ರತಿ ಬಿಂಬವಾಗಿವೆ. ಕಾಲೇಜುಗಳಲ್ಲಿ ನಿರಂತರವಾಗಿ ಜನಪದ ಉತ್ಸವಗಳು ನಡೆಯಬೇಕಿದೆ ಎಂದರು.

ಕಾಲೇಜಿನ ಪ್ರಾಂಶುಪಾಲ ಡಾ.ಕೆ. ಖಾದರಬಾಷಾ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಪ.ಪಂ.ಅಧ್ಯಕ್ಷ ಕೆ.ಶ್ಯಾಮೀದ್ ಸಾಬ್, ಮುಖಂಡ ಮಲ್ಲನಗೌಡ ದೇವರಮನಿ, ಬೀರಪ್ಪ ಶಂಬೋಜಿ, ಸಿಬ್ಬಂದಿ ಕಾರ್ಯದರ್ಶಿ ಡಾ.ವೆಂಕಟರಮಣ, ರಾಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥಡಾ.ದೇವಿದಾಸ, ಮೌಲಾಸಾಬ, ಉಪನ್ಯಾಸಕಿ ನಳಿನಾ ಸೇರಿದಂತೆ ಅನೇಕರು ಇದ್ದರು.

ಜನವಾದಿ
ಜಾಹೀರಾತಿಗಾಗಿ ಸಂಪರ್ಕಿಸಿ:
9448300139

# ಬದಲಾವಣೆ ತಹಶಿಲ್ದಾರ ವಿರುದ್ಧ ತನಿಖೆಗೆ ಆಗ್ರಹ

ತಹಶೀಲ್ದಾರ್ ಕಾರ್ಯನಿರ್ವಹಿಸಿ ಕರ್ತವ್ಯಲೋ ಪವೆಸಗಿ ಸರ್ಕಾರಿ ಸೇವೆಯಲ್ಲಿ ಇದ್ದು ಅಪರಾ ಧಕ್ಕೆ ಗುರಿಯಾಗುವ ಕೆಲಸಗಳನ್ನು ಮಾಡಿದ್ದಾರೆ ಎಂದು ದೂರಿದರು.

ಮಲಿಯಾಬಾದ್ ಗ್ರಾಮದ ಸರ್ಕಾರಿ ಅರಣ್ಯ ಇಲಾಖೆಯ ಕಬ್ಜಾದಲ್ಲಿ ಸುಮಾರು 50 ವರ್ಷಗಳಿಗೂ ಮೇಲ್ಪಟ್ಟು ಇದ್ದ ಹಾಗೂ ರಕ್ಷಿತ ಆರಣ್ಯ ಪ್ರದೇಶವೆಂದು ಘೋಷಿಸಿದೆ, ಭೂಮಿಯಲ್ಲಿ ಹಲವಾರು ವರ್ಷಗಳಿಂದಲೂ ನೆಡುತೋಪು ದೊಡ್ಡ ಗಿಡಗಳು ಭೂಮಿಯಲ್ಲಿ ಹಾಕಲಾಗಿದೆ. ಅರಣ್ಯ ಇಲಾಖೆಯ ಜಮೀನನ್ನು ಕಾನೂನು ಅಧಿಕಾರ ದುರುಪಯೋಗಪ ಡಿಸಿಕೊಂಡು ತಹಶೀಲ್ದಾರ ಸರಕಾರಿ ನಿಯಮ ಗಳನ್ನು ಉಲ್ಲಂಘಿಸಿ ಅಧಿಕಾರಿಗಳ ಅನುಮತಿ ಪಡೆಯದೇ ಅರಣ್ಯ ಮೇಲಿನ ಅಧಿಕಾರಿಗಳ ಗಮನಕ್ಕೆ ತಾರದೇ, ಕೊಟ್ಟಿ ಸಾಕ್ಷಿಗಳು ಸೃಷ್ಟಿಸಿ ಪೋರ್ಜರಿ ಹಕ್ಕುದಾರರಾಗಿರುವ ವ್ಯಕ್ತಿಗಳ ಹೆಸರಿಗೆ ಖಾತಾ ವರ್ಗಾವಣೆಯನ್ನು ಮಾಡಿದ್ದಾರೆ ಎಂದು ಆರೋಪಿಸಿದರು.

33ನೇ ವಾರ್ಡಿನ ಸರ್ಕಾರಿ ಜಮೀನು ಸರ್ವೆ ನಂ. 327/1 ವಿಸ್ತೀರ್ಣ 01–17 ಗುಂಟೆ ಭೂಮಿಯನ್ನು ಫೆಡರಲ್ ಖಾಸಗಿ ಕಾಲೇಜಿನ ಖಾಸಗಿ ವ್ಯಕ್ತಿಗಳಿಗೆ ಅನಧಿಕೃತವಾಗಿ ಖಾಸಗಿಯವರ ಹೆಸರಿಗೆ ಬದಲಾವಣೆ ಮಾಡಿ ಕರ್ತವ್ಯಲೋಪವೆ ಸಗಿದ್ದಾರೆ.

ಜಮೀನುಗಳಲ್ಲಿ ಅಕ್ರಮವಾಗಿ ಭೂಕಬಳಿಕೆ ದಾರರು ಅತಿಕ್ರಮಣ ಮಾಡಿ ಇಂಥ ಭ್ರಷ್ಟ ತಹಶೀಲ್ದಾರರು ಮತ್ತು ಕಂದಾಯ ನಿರೀಕ್ಷಕರು, ಗ್ರಾಮ ಲೆಕ್ಕಾಧಿಕಾರಿಗಳು ಹಾಗೂ ಇತರ ಸಿಬ್ಬಂದಿಗಳು ಸೇರಿ ಹಂತಹಂತವಾಗಿ ನಕಲಿ ದಾಖಲೆಗಳನ್ನು ಅಕ್ರಮದಿಂದ ಸೃಷ್ಟಿಸಿಕೊಂಡು ಸರ್ಕಾರಕ್ಕೆ ನೂರಾರು ಕೋಟಿಗಟ್ಟಲೆ ಹಣ ಸರಕಾರಕ್ಕೆ ನಷ್ಟ, ವಂಚನೆ, ಮೋಸ ಮಾಡಿ ಕಾನೂನು ಬಾಹಿರವಾಗಿ ಖಾತಾ ಬದಲಾವಣೆಗಳನ್ನು ಮಾಡಿಕೊಟ್ಟಿದ್ದಾರೆ. ಇವರನ್ನು ಕಾನೂನು ಅಡಿಯಲ್ಲಿ ತನಿಖೆಗೊಳಪಡಿಸಿ ಕಾನೂನಿನ ಕ್ರಮ ಕೈಗೊಳ್ಳಬೇಕು, ಭೂಕಬಳಿಕೆದಾರರೊಂದಿಗೆ ಶಾಮೀಲಾಗಿ ತಮ್ಮ ಅಧಿಕಾರ ದುರುಪಯೋಗ ಪಡಿಸಿಕೊಂಡಿದ್ದಾರೆ ಮತ್ತು ಸರ್ಕಾರಿ ಸೇವೆಯಲ್ಲಿ ನಿಷ್ಠೆ ಇರದೆ ಕರ್ತವ್ಯಲೋಪಗಳನ್ನು ಎಸಗಿದ್ದಾರೆ. ಸೇವೆಯಿಂದ ಅಮಾನತುಗೊಳಿಸಿ ಸೂಕ್ತ ಕ್ರಮ ಕೈಗೊಳ್ಳಲು ಒತ್ತಾಯಿಸಿದರು.

# ವಾಸವಿ ಜಯಂತಿ ಅಂಗವಾಗಿ ಉಚಿತ ಆರೋಗ್ಯ ತಪಾಸಣೆ ಶಿಬಿರ

## ನಮ್ಮ ಆರೋಗ್ಯವನ್ನು ಹಾಗೂ ಜೀವವನ್ನು ರಕ್ಷಿಸುವ ವೈದ್ಯರು ಭಗವಂತನ ಸ್ವರೂಪರಾಗಿರುತ್ತಾರೆ – ಕಲ್ಮಠ ಶ್ರೀ

ಜನವಾದಿ ವಾರ್ತೆ





ಮಾನ್ವಿ ಮೇ 7– ಪಟ್ಟಣದ ನಗರೇಶ್ವರ ದೇವಸ್ಥಾನದಲ್ಲಿ ವಾಸವಿ ಜಯಂತಿ ಅಂಗವಾಗಿ ನಗರೇಶ್ವರ ಆರ್ಯವೈಶ್ಯ ಸಂಘ ಹಾಗೂ ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆ ಸಂ–ಯುಕ್ತಾಶ್ರಯದಲ್ಲಿ ನಡೆದ ಉಚಿತ ಆರೋಗ್ಯ ತಪಾಸಣೆ ಶಿಬಿರವನ್ನು ಕಲ್ಮಠ ಶ್ರೀ ವಿರೂಪಾಕ್ಷ ಪಂಡಿತ ಶಿವಾಚಾರ್ಯ ಮಹಾಸ್ವಾಮಿಗಳು ಉದ್ಘಾಟಿಸಿ ಮಾತನಾಡಿ ನಮ್ಮ ಆರೋಗ್ಯವನ್ನು ಹಾಗೂ ಜೀವವನ್ನು ರಕ್ಷಿಸುವ ವೈದ್ಯರು ಭಗವಂತನ ಸ್ವರೂಪರಾಗಿರುತ್ತಾರೆ ಅವರನ್ನು ಗೌರವಿಸುವ ಕೆಲಸವನ್ನು ಪ್ರತಿಯೊಬ್ಬರು ಕೂಡ ಮಾಡಬೇಕು ಪಟ್ಟಣದ ಲಕ್ಷ್ಮಿಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ವೈದ್ಯರು ಜನರ ಸೇವೆಯನ್ನು ಬಯಸುವವರಾಗಿದ್ದು ತಾಲೂಕಿನ ಅನೇಕ ಗ್ರಾಮೀಣ ಭಾಗದಲ್ಲಿ ಉಚಿತ ಆರೋಗ್ಯ ಶಿಬಿರಗಳನ್ನು ನಡೆಸುವ ಮೂಲಕ ಬಡಜನರಿಗೂ ಕೂಡ ಉತ್ತಮವಾದ ಆರೋಗ್ಯವನ್ನು ನೀಡುತ್ತ ಬಂದಿರುವ ಅವರ ಸೇವೆ ಉತ್ತಮವಾಗಿದೆ ಎಂದು ತಿಳಿಸಿದರು.

ತಾಲೂಕ ಭಾರತೀಯ ವೈದ್ಯಕೀಯ ಸಂಘದ ಅಧ್ಯಕ್ಷರಾದ ಡಾ.ಶರಣಪ್ಪ ಬಲ್ಲಟ್ಟಗಿ ಮಾತನಾಡಿ ವೈದ್ಯರು ತುರ್ತು ಪರಿಸ್ಥಿಗಳಲ್ಲಿಯು ಕೂಡ ರೋಗಿಯ ಪ್ರಾಣವನ್ನು ಉಳಿಸುವುದಕ್ಕೆ ಪ್ರಾಯತ್ನಿಸುತ್ತಾರೆ ಕೇಲವೊಮ್ಮೆ ಆಕಸ್ಮಿಕವಾಗಿ ರೋಗಿಯು ಜೀವ ಉಳಿಸುವಲ್ಲಿ ವಿಫಲರಾದ ವೈದ್ಯರ ಮೇಲೆ ಸಂಬಂದಿಕರಿಂದ ಹಲ್ಲೆ ಆಸ್ಪತ್ರೆಯ ಆಸ್ತಿಗಳ ನಷ್ಟ ಉಂಟಾಗುವುದರಿಂದ ಇಂದು ವೈದ್ಯರು ತುರ್ತು ಸಮಯದಲ್ಲಿ ರೋಗಿಗಳಿಗೆ ಚಿಕಿತ್ಸೆ ನೀಡುವುದಕ್ಕೆ ಮುಂದೆ ಬರುತ್ತಿಲ್ಲ ಇದ್ದರಿಂದ ಅನೇಕ ಜೀವಗಳು ಹೋಗುವ ಸಂಧರ್ಬಬಂದಿದೆ ಅದರಿಂದ ಸಾರ್ವಜನಿಕರು ಹಾಗೂ ವೈದ್ಯರ ನಡುವೆ ಉತ್ತಮ ಸಂಬಂದ ಏರ್ಪಡಬೇಕಾಗಿದೆ ಎಂದು ತಿಳಿಸಿದರು.

ಉಚಿತ ಆರೋಗ್ಯ ತಪಾಸಣೆ ಶಿಬಿರದಲ್ಲಿ 200ಕ್ಕೂ ಹೆಚ್ಚು ಜನರಿಗೆ ಉಚಿತ ಆರೋಗ್ಯ ತಪಾಸಣೆ ಹಾಗೂ ಔಷಾಧಿಗಳನ್ನು ವಿತರಿಸಲಾಯಿತು.

ನಗರೇಶ್ವರ ಆರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್ .ಮುತ್ತುರಾಜಶೆಟ್ಟಿ , ಕಾರ್ಯದರ್ಶಿ ಬಿ.ಈರಣ್ಣ, ಶ್ರೀ ಲಕ್ಷ್ಮಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯ ಅಧ್ಯಕ್ಷರಾದ ರಾಮಾಂಜನೇಯ್ಯಶೆಟ್ಟಿ, ಡಾ.ರಾಘವೇಂದ್ರ, ಡಾ.ಸುಮಾನ್, ಡಾ.ಕಾವ್ಯ, ಡಾ.ಕೋಟಿರೆಡ್ಡಿ, ಸೈಯಾದ್ ಖಾಲಿದ್ ಖಾದ್ರಿ, ಸೇರಿದಂತೆ ಇನ್ನಿತರರು ಇದ್ದರು.

# ಶ್ರೀ ನಗರೇಶ್ವರ ದೇವಸ್ಥಾನದಲ್ಲಿ ಶ್ರೀ ವಾಸವಿ ಜಯಂತಿ ಆಚರಣೆ

ಜನವಾದಿ ವಾರ್ತೆ





ಮಾನ್ವಿ ಮೇ 7– ಪಟ್ಟಣದ ನಗರೇಶ್ವರ ದೇವಸ್ಥಾನದಲ್ಲಿ ಶ್ರೀ ವಾಸವಿ ಜಯಂತಿ ಅಂಗವಾಗಿ ಶ್ರೀ ಕನ್ನಿಕಪರಮೇಶ್ವರಿ ಅಮ್ಮನವರಿಗೆ ಬೆಳಿಗ್ಗೆ ಸುಪ್ರಭಾತ ಸೇವೆ. ಕುಂಭಾಭಿಷೇಕ, ಸುಮಂಗಲಿಯರಿಂದ ವಾಸವಿ ಅಮ್ಮನವರಿಗೆ ಉಡಿ ಅಕ್ಕಿ ತುಂಬವ ಕಾರ್ಯಕ್ರಮ ನಡೆಯಿತು .ವಾಸವಿ ಜಯಂತಿ ಅಂಗವಾಗಿ ಕನ್ನಿಕಪರಮೇಶ್ವರಿ ಅಮ್ಮನವರ ಮೂರ್ತಿಗೆ ವಿಶೇಷ ಅಲಂಕಾರವನ್ನು ಮಾಡಲಾಗಿತ್ತು. ವಾಸವಿ ಅಮ್ಮನವರ ರಜತ ಹಾಗೂ ಕಟ್ಟಿಗೆಯ ಜೋಡಿ ರಥ–ೋತ್ಸವ ನಡೆಯಿತು. ಕಾರ್ಯಕ್ರಮದಲ್ಲಿ ನಗರೇಶ್ವರ ಅರ್ಯವೈಶ್ಯ ಸಂಘದ ತಾ.ಅಧ್ಯಕ್ಷರಾದ ಆರ್. ಮುತ್ತುರಾಜ್ ಶೆಟ್ಟಿ,ಕಾರ್ಯದರ್ಶಿ ಬಿ.ಈರಣ್ಣ ಶೆಟ್ಟಿ ಸೇರಿದಂತೆ ಸಾವಿರಾರು ಜನರು ವಾಸವಿ ಜಯಂತಿ ಕಾರ್ಯಕ್ರಮದಲ್ಲಿ ಭಾಗವಹಿಸಿದರು.

ವಾಸವಿ ಜಯಂತಿ ಅಂಗವಾಗಿ ವಾಸವಿ ಕಲ್ಯಾಣ ಮಂಟಪದಲ್ಲಿ ತಾಲೂಕು ಸಾರ್ವಜನಿಕ ಆಸ್ಪತ್ರೆ ಸಹಯೋಗದಲ್ಲಿ ನಡೆದ ರಕ್ತದಾನ ಶಿಬಿರಕ್ಕೆ ಕಲ್ಮಠ ವಿರೂಪಾಕ್ಷ ಪಂಡಿತಾರಾಧ್ಯ ಶಿವಚಾರ್ಯ ಮಹಾಸ್ವಾಮಿಗಳು ಚಾಲನೆ ನೀಡಿದರು. ರಿಮ್ಸ್ ರಕ್ತಭಂಡರದ ಸಿಬ್ಬಂದಿಗಳು ರಕ್ತದಾನ ಶಿಬಿರವನ್ನು ನಡೆಸಿಕೊಟ್ಟರು ರಕ್ತದಾನಿಗಳು ರಕ್ತವನ್ನು ದಾನಮಾಡಿದರು.

Printed by , Published by, Owned by : basavaraj H , Printed and Published at Basavashree Printers and Publishers, H.No.1-11-54/32, Prashanth Colony, RAICHUR-584101. Editor. BASAVARAJ H